ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಏಪ್ರಿಲ್ 25, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 344 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
☎ 08192 254736 91642 99999

## ಶಾಂತಿಯುತ ಮತದಾನಕ್ಕೆ ಅರೆಸೇನಾ ಪಡೆ, ಮತಗಟ್ಟೆಗಳಲ್ಲಿ ಕಣ್ಗಾವಲು

ಬೆಂಗಳೂರು, ಏ. 24 - ಏಪ್ರಿಲ್ 26ರಂದು ಚುನಾವಣೆ ನಡೆಯಲಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತ ಮತದಾನಕ್ಕಾಗಿ ಅರೆಸೇನಾ ಪಡೆ ಮತ್ತು ಮತಗಟ್ಟೆಗಳಲ್ಲಿ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ.

ಇದೇ ಮೊದಲ ಬಾರಿಗೆ ಮತಗಟ್ಟೆಗಳಿಗೆ ಆಯೋಗ ಮೊಬೈಲ್ ನಿಷೇಧಿಸಿದೆ. ಮತದಾರರ ಎಡಗೈ ತೋರುಬೆರಳಿಗೆ ಅಳಿಸಲಾಗದ ಶಾಯಿ ಬಳಕೆ ಮಾಡುತ್ತಿದೆ.

ಹದಿನಾಲ್ಕು ಕ್ಷೇತ್ರಗಳ ವ್ಯಾಪ್ತಿಯಲ್ಲಿ 5,000 ಮೈಕ್ರೋ ಅಬ್ಸರ್ವರ್‌ಗಳನ್ನು ನೇಮಿಸಲಾಗಿದೆ.

ಮತದಾನ ಸಿದ್ಧತೆ ಸಂಬಂಧ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ರಾಜ್ಯ ಮುಖ್ಯಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, 65 ಕಂಪನಿ ಅರೆಸೇನಾ ಪಡೆ ಹಾಗೂ ಅನ್ಯ ರಾಜ್ಯಗಳ ವಿಶೇಷ ಪೊಲೀಸ್ ಪಡೆಗಳನ್ನು ಭದ್ರತೆಗಾಗಿ ನಿಯೋಜಿಸಲಾಗುತ್ತಿದೆ ಎಂದರು.

ಮತದಾನದ ಅನುಕೂಲಕ್ಕಾಗಿ 1,40,000 ಸಿಬ್ಬಂದಿ ನೇಮಿಸಲಾಗಿದೆ, ಬಿಗಿ

**ಇದೇ ಮೊದಲ ಬಾರಿಗೆ ಮತಗಟ್ಟೆಗಳಿಗೆ ಮೊಬೈಲ್ ನಿಷೇಧಿಸಿದ ಆಯೋಗ**

ಬಂದೋಬಸ್ತ್‌ಗಾಗಿ 65 ಅರೆಸೇನಾ ಕಂಪನಿ ಜೊತೆಗೆ ನೆರೆ ರಾಜ್ಯ ಹಾಗೂ ರಾಜ್ಯದ 50,000 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ ಎಂದರು.

ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ, ಇಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನು ಜಿಲ್ಲಾ ಚುನಾವಣಾಧಿಕಾರಿ ಹಾಗೂ ರಾಜ್ಯ ಮುಖ್ಯಚುನಾವಣಾಧಿಕಾರಿ ಕಚೇರಿ ಅಧಿಕಾರಿಗಳು ವೀಕ್ಷಣೆ ಮಾಡಬಹುದಾಗಿದೆ. ಎಲ್ಲಾ ಮತಗಟ್ಟೆಗಳಲ್ಲಿ ಕಣ್ಗಾವಲಿನ ವ್ಯವಸ್ಥೆ ಇದ್ದರೂ 14 ಕ್ಷೇತ್ರ ವ್ಯಾಪ್ತಿಯ 19,701 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ, ಅಂದರೆ ಮೂರನೇ ಎರಡು ಭಾಗದಲ್ಲಿ ಈ ವ್ಯವಸ್ಥೆ ಇದೆ ಎಂದರು.

ಬಹಿರಂಗ ಪ್ರಚಾರ ಅಂತ್ಯಗೊಂಡಿದ್ದು ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಸಾರ್ವಜನಿಕ ಭಾಷಣ ಮತ್ತು ರ್‍ಯಾಲಿಗಳನ್ನು ನಡೆಸುವಂತಿಲ್ಲ, ಆದರೆ, ಐದು ಜನಕ್ಕೆ ಮೀರದಂತೆ ಮನೆ ಮನೆಗೆ ತೆರಳಿ ಮತ ಯಾಚನೆ ಮಾಡುಬಹುದಾಗಿದೆ.

ಮತದಾರರಲ್ಲದ ರಾಜಕೀಯ ಮುಖಂಡರು ಮತ್ತು ಕಾರ್ಯಕರ್ತರು ಕ್ಷೇತ್ರ ತೆರವುಗೊಳಿಸ ಬೇಕು, ಈ ನಿಯಮ ಸಾರ್ವಜನಿಕರಿಗೆ ಮತ್ತು ಪ್ರವಾಸಿಗರಿಗೆ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು-ಕೊಡಗು, ಚಾಮರಾಜನಗರ, ಹಾಸನ, ಮಂಡ್ಯ, ಉಡುಪಿ-ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಚಿಕ್ಕ ಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಹಾಗೂ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2,88,19,342 ಮತದಾರರಿದ್ದು ಇವರ ಅನುಕೂಲಕ್ಕಾಗಿ ಒಟ್ಟು 30,602 ಮತಗಟ್ಟೆಗಳನ್ನು ನಿರ್ಮಿಸಲಾಗಿದೆ ಎಂದರು.

## ಐದನೇ ಬಾರಿ ದಾವಣಗೆರೆ ನಗರಕ್ಕೆ ಮೋದಿ

### ದಾವಣಗೆರೆ, ಹಾವೇರಿ ಲೋಕಸಭಾ ಅಭ್ಯರ್ಥಿಗಳ ಪರ ಮತಯಾಚನೆ

ದಾವಣಗೆರೆ, ಏ. 24 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಏ. 28ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ನಗರದ ಹೈಸ್ಕೂಲ್ ಮೈದಾನ ದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದು, ದಾವಣಗೆರೆ ಹಾಗೂ ಹಾವೇರಿ ಕ್ಷೇತ್ರಗಳ ಅಭ್ಯರ್ಥಿಗಳ ಪರ ಮತಯಾಚನೆ ಮಾಡಲಿದ್ದಾರೆ.

ನಗರದ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿರುವ ಸಮಾವೇಶಕ್ಕೆ ಹಂದರ ಪೂಜೆ ನೆರವೇರಿಸಿ ನಂತರ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ದಾವಣಗೆರೆ ಹಾಗೂ ಹಾವೇರಿ

**ಸಮಾವೇಶದ ವೇದಿಕೆ ನಿರ್ಮಾಣಕ್ಕೆ ಹಂದರ ಪೂಜೆ ನೆರವೇರಿಸಿದ ಸಂಸದ ಸಿದ್ದೇಶ್ವರ**

ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡಂತೆ ಸಮಾವೇಶ ನಡೆಯಲಿದೆ ಎಂದರು.

ಈ ಬಾರಿ ಕಾರ್ಯಕರ್ತರು ಹೆಚ್ಚಿನ ಉತ್ಸಾಹ ದಲ್ಲಿದ್ದು, ಅತಿ ಹೆಚ್ಚು ಮತಗಳಿಂದ ದಾವಣಗೆರೆ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಗೆಲುವು ಸಾಧಿಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಅಂದಿನ ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಬಿ.ವೈ. ವಿಜಯೇಂದ್ರ, ಹಾವೇರಿ ಅಭ್ಯರ್ಥಿಯೂ ಆಗಿರುವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತಿತರೆ ನಾಯಕರು ಭಾಗವಹಿಸಲಿದ್ದಾರೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, (4ನೇ ಪುಟಕ್ಕೆ)

## ಕೋಟಕ್ ಮಹಿಂದ್ರ ಬ್ಯಾಂಕ್‌ಗೆ ಗ್ರಾಹಕರ ಸೇರ್ಪಡೆಗೆ ನಿರ್ಬಂಧ

ಮುಂಬೈ, ಏ. 24 – ಆನ್‌ಲೈನ್ ಹಾಗೂ ಮೊಬೈಲ್ ಬ್ಯಾಂಕಿಂಗ್ ಮೂಲಕ ಹೊಸ ಗ್ರಾಹಕರನ್ನು ಸೇರಿಸಿಕೊಳ್ಳದಂತೆ ಕೋಟಕ್ ಮಹಿಂದ್ರ ಬ್ಯಾಂಕ್ ಮೇಲೆ ಆರ್.ಬಿ.ಐ. ನಿರ್ಬಂಧಿಸಿದೆ. (4ನೇ ಪುಟಕ್ಕೆ)

IAS / IPS ಹಾಗೂ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳು ಮತ್ತು ಉದ್ಯೋಗಾವಕಾಶ
ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಶಿಕ್ಷಣ ಪಡೆಯಲು
ಉಚಿತ ಕಾರ್ಯಾಗಾರ
ಶಿವಯೋಗಿ ಮಂದಿರ (ಮುರುಘಾ ಮಠ) ಜಯದೇವ ಸರ್ಕಲ್,
ಜಗದ್ಗುರು ಶ್ರೀ ಜಯದೇವ ಸಾಂಸ್ಕೃತಿಕ ಭವನ, ದಾವಣಗೆರೆ.
ದಿನಾಂಕ 25.04.2024 ರಂದು ಮಧ್ಯಾಹ್ನ 3 ರಿಂದ 5 ಗಂಟೆಯವರೆಗೆ
ಡಾ. ಶ್ರೀನಾಥ ಸಂಪನ್ಮೂಲ ವ್ಯಕ್ತಿಗಳು, (ಶಿಕ್ಷಣ ತಜ್ಞರು) ನ್ಯೂಯಾರ್ಕ್, ಅಮೇರಿಕ
ವಿಜಯಕುಮಾರ್ ಆರ್. ಸಂಪನ್ಮೂಲ ವ್ಯಕ್ತಿಗಳು (ಶಿಕ್ಷಣ ತಜ್ಞರು) ದಾವಣಗೆರೆ.
ಮತ್ತು 2024ನೇ ಸಾಲಿನ UPSC ಪರೀಕ್ಷೆಯಲ್ಲಿ
IAS / IPS ಆಗಿ ಆಯ್ಕೆಯಾದಂತಹ ಅಭ್ಯರ್ಥಿಗಳಾದ
ಶ್ರೀ ರಕ್ಷಿತಾ | ಶ್ರೀ ತೇಜಸ್ | ಶ್ರೀ ದಿಯಾ ದಾಸಗುಪ್ತ | ಶ್ರೀ ತೇಜಸ್ | ಕು.ತೇಜಸ್ವಿನಿ
ಇವರುಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಗದರ್ಶನ ಮತ್ತು
ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ
ಮತ್ತು ಅವಕಾಶ ಮಾಡಿಕೊಡಲಾಗುತ್ತದೆ.
: CONTACT :
M : 94487 13383, 94830 60773

## ಸಾವಿನ ನಂತರವೂ ಕಾಂಗ್ರೆಸ್ ಲೂಟಿ

### ಪಿತ್ರಾರ್ಜಿತ ಆಸ್ತಿ ತೆರಿಗೆಯ ಪಿತ್ರೋಡ ಪ್ರಸ್ತಾಪಕ್ಕೆ ಪ್ರಧಾನಿ ತರಾಟೆ



ಅಂಬಿಕಾಪುರ (ಛತ್ತೀಸ್‌ಘಡ), ಏ. 24 - ಕಾಂಗ್ರೆಸ್ ಪಕ್ಷ ಪಿತ್ರಾರ್ಜಿತ ಆಸ್ತಿ ಮೇಲೆ ತೆರಿಗೆ ಹೇರಲು ಬಯಸಿದೆ. ಬದುಕಿದ್ದಾಗಲೂ ಲೂಟಿ, ಸತ್ತ ಮೇಲೂ ಲೂಟಿ (ಕಾಂಗ್ರೆಸ್ ಕಿ ಲೂಟ್ ಜಿಂದಗಿ ಕೆ ಸಾತ್ ಭಿ, ಜಿಂದಗಿ ಕೆ ಬಾದ್ ಭಿ) ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಛತ್ತೀಸ್‌ಘಡದ ಸುರ್ಗುಜಾ ಜಿಲ್ಲೆಯ ಅಂಬಿಕಾಪುರದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಪಿತ್ರಾರ್ಜಿತ ತೆರಿಗೆ ಹೇರುವ ಮೂಲಕ ಮಕ್ಕಳ ಹಕ್ಕು ಕಸಿಯಲು ಬಯಸಿದೆ ಎಂದೂ ಆರೋಪಿಸಿದ್ದಾರೆ.

ಶಾಹಿ ಪರಿವಾರದ (ರಾಜ ಕುಟುಂಬ) ಶೆಹಜಾದಾ (ರಾಜಕುಮಾರ) ಸಲಹೆಗಾರರಾಗಿ, ಒಬ್ಬರು ಪಿತ್ರಾರ್ಜಿತ ಆಸ್ತಿ ಮೇಲೆ ತೆರಿಗೆ ಹೇರಬೇಕೆಂದು ಸಲಹೆ ನೀಡಿದ್ದಾರೆ ಎಂದು ಮೋದಿ ಹೇಳಿದರು.

ಪರೋಕ್ಷವಾಗಿ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಿಕಟ ವರ್ತಿ ಸ್ಯಾಮ್ ಪಿತ್ರೋಡಾ ಕುರಿತು ಮಾತನಾಡಿದರು. (2ನೇ ಪುಟಕ್ಕೆ)

## ಮತಯಂತ್ರ ಬಿಡಿ ಭಾಗಗಳ ಪೂರೈಕೆದಾರರ ವಿವರಕ್ಕೆ ನಕಾರ

ನವದೆಹಲಿ, ಏ. 24 – ಮತ ಯಂತ್ರಗಳ ಬಿಡಿ ಭಾಗಗಳ ಉತ್ಪಾದಕರ ಕುರಿತ ಮಾಹಿತಿಯನ್ನು ಬಹಿರಂಗ ಪಡಿಸಲು ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಇ.ಸಿ.ಐ.ಎಲ್.) ಹಾಗೂ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿ.ಇ.ಎಲ್.) ನಿರಾಕರಿಸಿವೆ.

ಮತ ಯಂತ್ರ ಹಾಗೂ ವಿವಿಪ್ಯಾಟ್ ಬಿಡಿ ಭಾಗಗಳ ಉತ್ಪಾದಕರು ಹಾಗೂ ಪೂರೈಕೆದಾರರ ವಿವರ ಕೇಳಿ ಮಾಹಿತಿ ಹಕ್ಕು ಅರ್ಜಿ ದಾಖಲಿಸಲಾಗಿತ್ತು. ಆದರೆ, ಇದು ವಾಣಿಜ್ಯ ಗೌಪ್ಯತೆಗೆ ಸಂಬಂಧಿಸಿದ ವಿಷಯ ಎಂದು ಕಂಪನಿಗಳು ಹೇಳಿವೆ.

ಮಾಹಿತಿ ಹಕ್ಕು ಕಾರ್ಯಕರ್ತ (4ನೇ ಪುಟಕ್ಕೆ)

ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,
ಆಡಳಿತ ಕಛೇರಿ : ಹದಡಿ ರಸ್ತೆ, ದಾವಣಗೆರೆ-2. ಫೋನ್ : 99011 20124, 98447 36220 ಶಾಖೆ : ವಿದ್ಯಾನಗರ ದಾವಣಗೆರೆ-6. ಫೋನ್ : 08192-262392

ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ



ಉದ್ಘಾಟನೆ:
ಪೂಜ್ಯ ಶ್ರೀ ವೇಮನಾನಂದ ಮಹಾಸ್ವಾಮೀಜಿಗಳು
ಶ್ರೀ ಮಹಾಯೋಗಿ ವೇಮನ ಸಂಸ್ಥಾನ ಮಠ, ರೆಡ್ಡಿ ಗುರುಪೀಠ,
ಎರೆಹೊಸಹಳ್ಳಿ, ಹರಿಹರ ತಾಲ್ಲೂಕು.

ಮಾನ್ಯ ಷೇರುದಾರರೇ ಮತ್ತು ಗ್ರಾಹಕರೇ,
ನಮ್ಮ ಸಂಘದ ನೂತನ ಕಟ್ಟಡವನ್ನು
ದಾವಣಗೆರೆಯ ಕೆ.ಟಿ.ಜೆ. ನಗರ, 3ನೇ ಮುಖ್ಯರಸ್ತೆ, 16ನೇ ತಿರುವು,
ಇಲ್ಲಿ ನಿರ್ಮಿಸಲಾಗಿದ್ದು,
ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು
ದಿನಾಂಕ 25-04-2024ರ ಗುರುವಾರ ಬೆಳಗ್ಗೆ 10-30 ಕ್ಕೆ
ಸಲ್ಲುವ ಶುಭ ಮುಹೂರ್ತದಲ್ಲಿ ಸರಳ ಪೂಜಾ ಸಮಾರಂಭದೊಂದಿಗೆ
ನೆರವೇರಿಸಲಾಗುವುದು. ಸಂಘದ ಸದಸ್ಯರು, ಗ್ರಾಹಕರು, ಆತ್ಮೀಯರು
ಈ ಶುಭ ಸಂದರ್ಭದಲ್ಲಿ ಹಾಜರಿದ್ದು, ಶುಭ ಹಾರೈಸಬೇಕಾಗಿ ವಿನಂತಿ.




ಶ್ರೀ ಆರ್. ವೆಂಕಟರೆಡ್ಡಿ
ಅಧ್ಯಕ್ಷರು


ಶ್ರೀ ಟಿ.ಹೆಚ್. ರಾಜಶೇಖರ್
ನಿರ್ದೇಶಕರು


ಶ್ರೀ ಮೇಕಾ ಮುರುಳಿಕೃಷ್ಣ
ನಿರ್ದೇಶಕರು



ಶ್ರೀ ಕೆ.ಬಿ. ನಾಗರಾಜ್
ನಿರ್ದೇಶಕರು


ಶ್ರೀ ನಾಗೇಂದ್ರ ಎನ್. ಲದ್ವಾ
ನಿರ್ದೇಶಕರು


ಶ್ರೀಮತಿ ಎ. ಶ್ರೀದೇವಿ ತಿಮ್ಮಾರೆಡ್ಡಿ
ನಿರ್ದೇಶಕರು


ಶ್ರೀ ಕೆ. ನಾರಾಯಣ
ನಿರ್ದೇಶಕರು


ಶ್ರೀ ಎ. ಪ್ರಕಾಶ್
ಉಪಾಧ್ಯಕ್ಷರು



ಶ್ರೀ ಬಿಜ್ಜಂ ವೆಂಕಟೇಶ್ವರ ರೆಡ್ಡಿ
ನಿರ್ದೇಶಕರು



ಶ್ರೀ ಬಿ. ಯೋಗಿರೆಡ್ಡಿ
ನಿರ್ದೇಶಕರು


ಶ್ರೀ ಬಿ. ವೆಂಕಟೇಶ್ವರ ರೆಡ್ಡಿ
ನಿರ್ದೇಶಕರು


ಶ್ರೀ ರಾಜಾನಾಯ್ಕ ಜಿ.ಆರ್.
ನಿರ್ದೇಶಕರು


ಶ್ರೀಮತಿ ವೈ. ಸರೋಜ ವೆಂಕಟೇಶ್ವರ ರೆಡ್ಡಿ
ನಿರ್ದೇಶಕರು


ಶ್ರೀ ರಾಮನಾರಾಯಣ ರೆಡ್ಡಿ
ಮುಖ್ಯ ಕಾರ್ಯನಿರ್ವಾಹಕರು


ಶ್ರೀ ಕೆ. ರಾಘವೇಂದ್ರ ರಾವ್
ವ್ಯವಸ್ಥಾಪಕರು

ವಿಶೇಷ ಸೂಚನೆ : 1) ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಎಲ್ಲ ಸದಸ್ಯ ಬಾಂಧವರು ಬರಬೇಕು. 2) ರಜೆ ಘೋಷಣೆ : ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ಪ್ರಯುಕ್ತ ದಿನಾಂಕ : 25.04.2024ರ ಗುರುವಾರದಂದು ಸಂಘದ ಕಚೇರಿಗೆ ರಜೆ ಘೋಷಿಸಲಾಗಿದೆ.

ತಮ್ಮ ಆಗಮನಾಭಿಲಾಷಿಗಳು ; ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ

# ಅಡಿಕೆ ಆಮದು ನಿಷೇಧ, ರಫ್ತುಗೆ ಉತ್ತೇಜನ ಶಾಂತಿಸಾಗರ ಅಭಿವೃದ್ಧಿಗೆ ಕ್ರಮ : ಪ್ರಭಾ ಎಸ್ಸೆಸ್ಸೆಂ



ಚನ್ನಗಿರಿ, ಏ. 24 - ದಾವಣಗೆರೆ ಜಿಲ್ಲೆಯಲ್ಲಿ ಅತಿಹೆಚ್ಚು ಅಡಿಕೆ ಬೆಳೆ ಪ್ರದೇಶ ಚನ್ನಗಿರಿ ತಾಲ್ಲೂಕು ಅಡಿಕೆ ನಾಡು ಎಂದು ಪ್ರಸಿದ್ದಿ ಆಗಿದ್ದು, ಇಂತಹ ಪ್ರದೇಶಕ್ಕೆ ಕಳಂಕ ಬರುವಂತೆ ಕೇಂದ್ರ ಸರ್ಕಾರ ಮತ್ತು ಈ ಜಿಲ್ಲೆಯ ಲೋಕಸಭಾ ಪ್ರತಿನಿಧಿ ನಡೆದುಕೊಂಡಿದ್ದಾರೆ ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಆರೋಪಿಸಿದರು.

ಚನ್ನಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚನ್ನಗಿರಿ ತಾಲ್ಲೂಕಿನ ಕೆಂಪನಹಳ್ಳಿ ಗ್ರಾಮದಿಂದ ಇಂದು ಪ್ರಚಾರ ಕಾರ್ಯ ಆರಂಭಿಸಿದ ಪ್ರಭಾ ಮಲ್ಲಿಕಾರ್ಜುನ್ ಅವರು, ಕೊಗಲೂರು, ದೊಡ್ಡ ಮಲ್ಲಾಪುರ, ಕರೇಕಟ್ಟೆ, ಸೋಮಲಾಪುರ, ಕಾಕನೂರು, ನುಗ್ಗಿಹಳ್ಳಿ, ಚಿಕ್ಕಗಂಗೂರು, ಕೊರಟಿಕೆರೆ, ಹೆಬ್ಬಳಗೆರೆ, ಹೊದಿಗೆರೆ, ಗರಗ, ದೇವರಹಳ್ಳಿ, ಕಗತೂರು, ಬುಳಸಾಗರ, ಇಟ್ಟಿಗೆ, ಲಿಂಗದಹಳ್ಳಿ, ನಲ್ಲೂರು ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ಚನ್ನಗಿರಿ ತಾಲ್ಲೂಕಿನಾದ್ಯಂತ ಅಡಿಕೆ ಬೆಳೆ ಬಂಪರ್ ಆಗಿ ಬೆಳೆಯುತ್ತಿದ್ದರೂ ಸಹ ಕೇಂದ್ರ ಸರ್ಕಾರ ಅಡಿಕೆಯನ್ನು ಬೇರೆ ರಾಷ್ಟ್ರಗಳಿಂದ ಆಮದು ಮಾಡಿಕೊಂಡಿತು. ಇದಕ್ಕೆ ಸಂಸದರು ಕನಿಷ್ಠ ಪಕ್ಷ ವಿರೋಧ ಸಹ ವ್ಯಕ್ತಪಡಿಸಲಿಲ್ಲ. ಇಂತಹ ಸಂಸದರು ನಿಮಗೆ ಬೇಕಾ ಎಂದು ಪ್ರಶ್ನಿಸಿದರು.

ಈ ಬಾರಿ ದೇಶದಲ್ಲಿ ಬದಲಾವಣೆ ಖಂಡಿತ ಆಗಲಿದ್ದು, ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಅಧಿಕಾರ ಹಿಡಿಯಲಿದ್ದು, ನಮ್ಮ ಸರ್ಕಾರದಲ್ಲಿ ಅಡಿಕೆಗೆ ಸ್ಥಿರ ಬೆಲೆ ಕೊಡಿಸುವುದು, ಅಡಿಕೆ ಸಂಸ್ಕರಣಾ ಘಟಕ ಆರಂಭಿಸುವುದು ಸೇರಿದಂತೆ ಅಡಿಕೆಗೆ ಪೂರಕವಾದ ವಾತಾವರಣ ನಿರ್ಮಿಸುತ್ತೇವೆ ಎಂದರು.

ಶಾಸಕ ಶಿವಗಂಗಾ ಬಸವರಾಜ್ ಅವರ ಸಹಕಾರದಿಂದ ಚನ್ನಗಿರಿ ಸುತ್ತಮುತ್ತ ರೈತರಿಗೆ ಸಮರ್ಪಕವಾದ ರಸ್ತೆಗಳ ನಿರ್ಮಾಣ ಹಾಗೂ ಏಷ್ಯಾದ ಅತಿದೊಡ್ಡ ಶಾಂತಿ ಸಾಗರವನ್ನು ಸಂಪೂರ್ಣ ಅಭಿವೃದ್ಧಿಗೊಳಿಸಲಾಗುವುದು ಎಂದು ಅವರು ಹೇಳಿದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ತರುವ ಭರವಸೆ ನೀಡಿತ್ತು. ಅದರಂತೆ ಸರ್ಕಾರ ಬಂದ ತಕ್ಷಣ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಇಂದು ಚನ್ನಗಿರಿ ವಿಧಾನಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ರೂ.177 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗವನ್ನು ಜಾರಿಗೊಳಿಸುವುದು, ನರೇಗಾ ಕೂಲಿ ಹಣವನ್ನು ರೂ. 400 ಕ್ಕೆ ಹೆಚ್ಚಿಸಲಾಗುವುದು ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ವಡ್ನಾಳ್ ರಾಜಣ್ಣ, ಶಾಸಕ ಶಿವಗಂಗಾ ಬಸವರಾಜ್, ಬ್ಲಾಕ್ ಅಧ್ಯಕ್ಷ ಜಬಿವುಲ್ಲಾ, ಶ್ರೀನಿವಾಸ್, ಪಕ್ಷದ ಮುಖಂಡರಾದ ಹೊದಿಗೆರೆ ರಮೇಶ್, ವೀರೇಶ್ ನಾಯ್ಕ, ವಡ್ನಾಳ್ ಜಗದೀಶ್, ಶಿವಗಂಗಾ ಶ್ರೀನಿವಾಸ್ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ನಾಡಿನ ಇತಿಹಾಸಕ್ಕೆ ಸ್ಫೂರ್ತಿದಾಯಕ ಮಹಿಳೆಯಾಗಿದ್ದ ಅಕ್ಕಮಹಾದೇವಿ



**ಹರಿಹರದ ಗಿರಿಯಮ್ಮ ಮಹಿಳಾ ಕಾಲೇಜಿನಲ್ಲಿನ ಕದಳಿ ಮಹಿಳಾ ವೇದಿಕೆಯ ಕಾರ್ಯಕ್ರಮದಲ್ಲಿ ಬ್ರಹ್ಮಾಕುಮಾರಿ ಶಿವದೇವಿ**

ಹರಿಹರ, ಏ.24- ನಾಡಿನ ಮಹಿಳೆಯರ ಒಳಿತಿಗಾಗಿ ಕಾವ್ಯದ ರೂಪದಲ್ಲಿ ಕನ್ನಡ ಭಕ್ತಿ ಸಾಹಿತ್ಯಕ್ಕೆ ಅಕ್ಕಮಹಾದೇವಿ ಕೊಟ್ಟಂತಹ ಕೊಡುಗೆ ಅವಿಸ್ಮರಣೀಯ ಎಂದು ಗಿರಿಯಮ್ಮ ಮಹಿಳಾ ಕಾಲೇಜು ಪ್ರಾಂಶುಪಾಲರಾದ ಟಿ.ಡಿ.ಸುಜಾತ ಅಭಿಪ್ರಾಯಪಟ್ಟರು.

ನಗರದ ಗಿರಿಯಮ್ಮ ಮಹಿಳಾ ಕಾಲೇಜು ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಕದಳಿ ಮಹಿಳಾ ವೇದಿಕೆ ವತಿಯಿಂದ ನಿನ್ನೆ ನಡೆದ ಅಕ್ಕಮಹಾದೇವಿ ಜಯಂತಿ, ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಕ್ಕಮಹಾದೇವಿಯವರು ಕನ್ನಡ ಭಾಷೆಯ ಆರಂಭಿಕ ಮಹಿಳಾ ಕವಿಗಳಲ್ಲೊಬ್ಬರಾಗಿ, 12ನೇ ಶತಮಾನದ ವೀರಶೈವ ಭಕ್ತಿ ಚಳವಳಿಯ ಪ್ರಸಿದ್ಧ ವ್ಯಕ್ತಿಗಳಾಗಿದ್ದರು. ಕನ್ನಡದ ಅವರ ವಚನಗಳು, ನೀತಿಬೋಧಕ ಕಾವ್ಯದ ರೂಪದಲ್ಲಿ ಕನ್ನಡ ಭಕ್ತಿ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯಾಗಿದೆ. ಸುಮಾರು 430ಕ್ಕೂ ಹೆಚ್ಚು ವಚನಗಳನ್ನು ಬರೆದು ದಕ್ಷಿಣ ಭಾರತದಾದ್ಯಂತ ಸಂಪ್ರದಾಯ ಹರಡುವಲ್ಲಿ ಮಹತ್ವದ ಪಾತ್ರ ವಹಿಸಿ, ಜೊತೆಗೆ ಸ್ತ್ರೀ ವಿಮೋಚನೆಯ ಮಹತ್ವದ ಬಗ್ಗೆ ಪ್ರತಿಪಾದಿಸಿ, ಮಹಿಳಾ ಸ್ವಾತಂತ್ರ ಮತ್ತು ಹಕ್ಕುಗಳ ಪರವಾಗಿ ಬಹಿರಂಗವಾಗಿ ಮಾತನಾಡಿ ಸಮಾಜದಲ್ಲಿ ಮಹಿಳೆಯರಿಗೆ ಹೆಚ್ಚು ಸ್ಥಾನಮಾನವನ್ನು ಕೊಡಿಸುವ ಮೂಲಕ ಸಮಾಜದ ಒಳಿತಿಗಾಗಿ ಶ್ರಮಿಸಿದ್ದರು ಎಂದು ಹೇಳಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವದೇವಿ ಅವರು ಮಾತನಾಡಿ, ಅಕ್ಕಮಹಾದೇವಿ ಅವರು ಸಾಮಾನ್ಯ ಮಹಿಳೆಯಾಗದೇ, ವೈರಾಗ್ಯ ದೇವತೆಯ ಸ್ವರೂಪವನ್ನು ಹೊಂದಿದ್ದರು. ಅವರು ನಾಡಿನ ಜನತೆಯ ಆರಾಧ್ಯ ದೈವವಾಗಿ ಹೊರಹೊಮ್ಮುವ ಮೂಲಕ ಪ್ರಕೃತಿಯಲ್ಲಿ ಶರಣತ್ವವನ್ನು ತುಂಬುವ ಪ್ರಯತ್ನ ಮಾಡಿದರು.

ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಇತಿಹಾಸಕ್ಕೆ ಸ್ಫೂರ್ತಿದಾಯಕ ಮಹಿಳೆಯಾಗಿದ್ದರು. 12ನೇ ಶತಮಾನದಲ್ಲಿ ಕಲಹ ಮತ್ತು ರಾಜಕೀಯ ಅನಿಶ್ಚಿತತೆ ಸಮಯದಲ್ಲಿ ಅಧ್ಯಾತ್ಮಿಕ ಜ್ಞಾನೋದಯ ಆರಿಸಿಕೊಂಡು, ತನ್ನ ಮನಸ್ಸು ದೇಹ ಮತ್ತು ಆತ್ಮ ಶಿವನಿಗೆ ಸೇರಿದ್ದು ಎಂದು ಚನ್ನಮಲ್ಲಿಕಾರ್ಜುನರ ಸಂಗವನ್ನು ಮಾಡಿದರು.

ತನ್ನ ಕುಟುಂಬದ ರಾಜಪ್ರಭುತ್ವದ ಸಂತೋಷಗಳನ್ನು ಮತ್ತು ಲೌಕಿಕ ನಿಯಂತ್ರಣಗಳನ್ನು ಹಿಂಭಾಗದಲ್ಲಿ ಬಿಟ್ಟು ಅರಮನೆಯನ್ನು ತೊರೆದು ಶರಣರ ಸಹವಾಸ ಕಂಡುಕೊಂಡು ಅನುಭವ ಮಂಟಪದಲ್ಲಿ ಸಾಮಾಜಿಕ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ನೀಡುತ್ತಾ, ನಾನಾ ವಿಷಯಗಳ ಮುಕ್ತ ಚರ್ಚೆಗೆ ವೇದಿಕೆ ಕಲ್ಪಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ, ಸಮಾಜವನ್ನು ಸುಧಾರಣೆ ತರುವ ನಿಟ್ಟಿನಲ್ಲಿ ತಮ್ಮ ಹೆಜ್ಜೆಗಳನ್ನು ಹಾಕಿ, ನಂತರ ಕದಳಿ ವನವನ್ನು ಕಂಡುಕೊಂಡು ತನ್ನ ಉಳಿದ ಜೀವನವನ್ನು ಗುಹೆಯಲ್ಲಿ ಕಳೆದರು ಎಂದು ಹೇಳಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಬಿ.ಟಿ.ಪ್ರಕಾಶ್ ಮಾತನಾಡಿ, ಪೋಷಕರು ತಮಗೆ ಎಷ್ಟೇಲ್ಲಾ ಕೆಲಸದ ಒತ್ತಡ ಇದ್ದರೂ ಸಹ ಮಕ್ಕಳಿಗೆ ಮನೆಯಲ್ಲಿ ಧಾರ್ಮಿಕ, ಸಾಮಾಜಿಕ, ಅಧ್ಯಾತ್ಮಿಕ ವಿಚಾರಗಳು ಬಗ್ಗೆ ಜ್ಞಾನವನ್ನು ನೀಡಿದಾಗ ದಾರ್ಶನಿಕರ, ಶರಣ ವಿಚಾರಗಳನ್ನು ಮಕ್ಕಳು ಅರಿತುಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ರೂಪಾ ಕುರುವತ್ತಿ ನಾಗರಾಜ್ ಮಾತನಾಡಿ, ಅಕ್ಕಮಹಾದೇವಿಯವರು ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಸಮಾಜವನ್ನು ಒಂದುಗೂಡಿಸುವ ಸೇತುವೆಯಾಗಿ ತಮ್ಮ ಕಾರ್ಯವನ್ನು ಮಾಡಿದ್ದರಿಂದ ಎಲ್ಲಾ ವರ್ಗದವರಿಗೆ ಆದರ್ಶವಾಗಿದ್ದಾರೆ ಎಂದು ಹೇಳಿದರು.

ಹರಿಹರ ತಾಲ್ಲೂಕು ಕದಳಿ ಮಹಿಳಾ ವೇದಿಕೆಯ ಸದಸ್ಯರಿಂದ ಮತ್ತು ಬಿ.ಟಿ. ಪ್ರಕಾಶ್ ವಚನ ಗಾಯನ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಸಂಗೀತ ಶಿಕ್ಷಕಿ ಜಯಶ್ರೀ ಹೆಚ್.ಶ್ರೀಧರ್, ದತ್ತಿ ದಾನಿಗಳಾದ ಯಶೋಧ ಕೊಂಡಜ್ಜಿ, ಕದಳಿ ಮಹಿಳಾ ವೇದಿಕೆಯ ಗೌರವಾಧ್ಯಕ್ಷರಾದ ಸುನೀತಾ ಮಲ್ಲೇಶ್ ಮಾರವಳ್ಳಿ, ಉಪಾಧ್ಯಕ್ಷರಾದ ವೀರಮ್ಮ ಅಶೋಕ, ಕಾರ್ಯದರ್ಶಿ ಪ್ರೇಮ ಎಸ್.ಓಂಕಾರಪ್ಪ, ಖಜಾಂಚಿ ಎನ್. ಮಂಜುಳಾ, ಗೌರವ ಸಲಹೆಗಾರರು ಹೆಚ್. ಕೆ.ಜ್ಯೋತಿ ನಾಗರಾಜ್, ಪದಾಧಿಕಾರಿಗಳಾದ ಸುಧಾ ಬಣಕಾರ್, ಮಂಗಳಾ ಪಟೇಲ್, ಎಂ.ಎಸ್. ಕವಿತಾ, ಶಿವಲಿಂಗಮ್ಮ ಹುಲ್ಮನಿ, ಶಂಕುತಲಾ ಪವಾರ್, ಮಮತಾ ಬೆಲ್ಲದ್, ಭಾರತಿ ಪ್ರಕಾಶ್, ವಿಜಯಲಕ್ಷ್ಮಿ, ಬಿ.ಜೆ. ಶಂಕುತಲಾ ಮುತ್ತಣ್ಣ ಅಂಗಡಿ, ಗಿರಿಜಮ್ಮ ಎಂ.ಪಿ.ಮಂಜುಳಾ ಕೃಷ್ಣಮೂರ್ತಿ, ಜಯಮ್ಮ ಬಣಕಾರ್, ಲತಾ ಹುಲ್ಮನಿ, ಅಂಜು ಸುರೇಶ್ ರಾಜನವರ್, ಮೀನಾಕ್ಷಿ ಶಿವಕುಮಾರ್, ನಗರಸಭೆ ಮಾಜಿ ಸದಸ್ಯರಾದ ಅಂಬುಜಾ ಪಿ.ರಾಜೊಳ್ಳಿ, ಕರಿಬಸಮ್ಮ ಶಿಲ್ಪಾ ಟಿ.ಜೆ. ಮುರುಗೇಶಪ್ಪ, ಈಶ್ವರೀಯ ವಿಶ್ವ ವಿದ್ಯಾಲಯದ ಸಂಗೀತಾ ಹಾಗೂ ಇತರರು ಹಾಜರಿದ್ದರು.



# ಡಾ. ಪ್ರಭಾ ಮಲ್ಲಿಕಾರ್ಜುನ ಅವರಿಗೆ ಕುಂಬಾರ ಸಮಾಜದ ಸ್ವಾಮಿಗಳ ಆಶೀರ್ವಾದ

ದಾವಣಗೆರೆ, ಏ. 24 - ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ ಅವರು ಚಿತ್ರದುರ್ಗದ ಕುಂಬಾರ ಸಮಾಜದ ಶ್ರೀ ಬಸವಮೂರ್ತಿ ಗುಂಡಯ್ಯ ಸ್ವಾಮಿಗಳವರನ್ನು ನಿನ್ನೆ ಭೇಟಿಯಾಗಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಕೆ. ಏಕಾಂತಪ್ಪ, ಕೆ.ವೈ. ತಿಪ್ಪೇಸ್ವಾಮಿ, ರುದ್ರಣ್ಣ, ಕೆ.ಎಂ. ತಿಪ್ಪೇಸ್ವಾಮಿ, ಈಶ್ವರಪ್ಪ, ಶ್ರೀಮತಿ ನಾಗಮ್ಮ, ಶ್ರೀಮತಿ ಆಶಾ ಪರಮೇಶ್, ಷಣ್ಮುಖ ಮತ್ತಿತರರು ಉಪಸ್ಥಿತರಿದ್ದರು.

# ಕರ್ನಾಟಕದಲ್ಲಿ ಒ.ಬಿ.ಸಿ. ಮೀಸಲಾತಿ ಪಾಲು ಕಡಿತಗೊಳಿಸಿದ್ದ ಕಾಂಗ್ರೆಸ್

**ಮೀಸಲಾತಿ ರಕ್ಷಣೆಗಾಗಿ 400ಕ್ಕೂ ಹೆಚ್ಚು ಸೀಟು ಕೊಡಿ : ಮೋದಿ**

ಸಾಗರ, ಏ. 24 - ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವು ಒಬಿಸಿಗಳ ಪಟ್ಟಿಯಲ್ಲೇ ಮುಸ್ಲಿಮರ ಎಲ್ಲಾ ಜಾತಿಗಳಿಗೂ ಮೀಸಲಾತಿಯನ್ನು ಕಲ್ಪಿಸುವ ಮೂಲಕ ಹಿಂದುಳಿದವರ ಮೀಸಲಾತಿಯನ್ನು ಕಡಿತಗೊಳಿಸಿತ್ತು. ಅದನ್ನು ದೇಶದಾದ್ಯಂತ ವಿಸ್ತರಿಸಲೂ ಯೋಜಿಸಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಆರೋಪಿಸಿದರು.

ಮಧ್ಯಪ್ರದೇಶದ ಸಾಗರ ಜಿಲ್ಲೆಯ ಚುನಾವಣಾ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಒಬಿಸಿಗಳ ದೊಡ್ಡ ಶತ್ರು. ಇತರೆ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೀಸಲಾತಿ ರಕ್ಷಿಸುವ ಸಲುವಾಗಿ ಬಿಜೆಪಿಗೆ ಲೋಕಸಭೆಯಲ್ಲಿ 400ಕ್ಕೂ ಹೆಚ್ಚು ಸೀಟುಗಳ ಅಗತ್ಯವಿದೆ ಎಂದರು.

ಕಾಂಗ್ರೆಸ್ ಈ ಹಿಂದೆ ಕರ್ನಾಟಕದಲ್ಲಿ ಮುಸ್ಲಿಮರ ಎಲ್ಲಾ ಜಾತಿಗಳಿಗೆ ಒ.ಬಿ.ಸಿ. ವರ್ಗದಲ್ಲಿ ಮೀಸಲಾತಿ ಕಲ್ಪಿಸಿತ್ತು. ಆ ಮೂಲಕ ಒ.ಬಿ.ಸಿ. ವರ್ಗದ ದೊಡ್ಡ ಪ್ರಮಾಣದ ಮೀಸಲಾತಿ ಕಸಿದಿತ್ತು. ನಿಮ್ಮ ಪೀಳಿಗೆಗಳನ್ನು ನಾಶಗೊಳಿಸುವ ಅಪಾಯಕಾರಿ ಆಟದಲ್ಲಿ ಕಾಂಗ್ರೆಸ್ ತೊಡಗಿದೆ ಎಂದವರು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ಇದೇ ಸೂತ್ರವನ್ನು ಇಡೀ ದೇಶದಲ್ಲಿ ಜಾರಿಗೆ ತರಲು ಬಯಸಿದೆ. ಆದರೆ, ಸಂವಿಧಾನದಲ್ಲಿ ಧರ್ಮ ಆಧರಿತ ಮೀಸಲಾತಿಗೆ ಅವಕಾಶವಿಲ್ಲ ಎಂದು ಮೋದಿ ಹೇಳಿದರು.

ಈ ಹಿಂದೆ ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ಧರ್ಮದ ಆಧಾರದ ಮೇಲೆ ನೀಡಲಾಗಿದ್ದ ಮೀಸಲಾತಿಯನ್ನು, ನಂತರ ಬಂದ ಬಿಜೆಪಿ ಸರ್ಕಾರ ರದ್ದುಗೊಳಿಸಿತ್ತು ಎಂದೂ ಅವರು ಹೇಳಿದರು.

ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಆದರೆ, ಒ.ಬಿ.ಸಿ., ದಲಿತರು ಹಾಗೂ ಬುಡಕಟ್ಟು ಜನರ ಮೀಸಲಾತಿಯನ್ನು ಕಸಿಯುವ ಅಪಾಯಕಾರಿ ಆಟವನ್ನು ಅಂತ್ಯಗೊಳಿಸಬೇಕಿದೆ. ಮೀಸಲಾತಿಗೆ ರಕ್ಷಣೆ ನೀಡಲು ಬಿಜೆಪಿಗೆ 400ಕ್ಕೂ ಹೆಚ್ಚು ಸೀಟುಗಳ ಅಗತ್ಯವಿದೆ ಎಂದು ಮೋದಿ ತಿಳಿಸಿದರು.

# ಹರಪನಹಳ್ಳಿ ತಾ. ಚಿಗಟೇರಿ ಗ್ರಾಮದ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ



ಹರಪನಹಳ್ಳಿ, ಏ.24- ಹರಪನಹಳ್ಳಿ ತಾಲೂಕು ಚಿಗಟೇರಿ ಗ್ರಾಮದ ಕಾಂಗ್ರೆಸ್ ಸದಸ್ಯರು ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಎಂ.ಎಂ.ನೀಲಪ್ಪ, ಗ್ರಾಮ ಪಂಚಾಯಿತಿ ಸದಸ್ಯರಾದ ಕೆ.ಪರಸಪ್ಪ, ಟಿ.ಶಿವಕುಮಾರ್ ಗೌಡ, ಎಂ.ಗೌಡಪ್ಪ, ಕೆ.ಹಾಲಪ್ಪ, ಯು.ಎಂ.ಸಿದ್ದೇಶಿ, ಕೆ.ವೀರಭದ್ರಪ್ಪ, ಕೆ.ಕರಿಬಸಪ್ಪ, ಎಸ್.ರಮೇಶ್, ಡಿ.ಎಂ.ವೀರಯ್ಯ, ಎಂ.ಕೊಟ್ರೇಶ್, ಬಣಕಾರ ಶಾಂತಪ್ಪ, ಬಣಕಾರ ರೇವಣಸಿದ್ದಪ್ಪ, ಬಣಕಾರ ಸಿದ್ದಲಿಂಗಪ್ಪ, ಎಚ್.ಅಜ್ಜಪ್ಪ, ಡಿ.ಕರಿಬಸಪ್ಪ, ದ್ಯಾಮಗೌಡ್ರ ರಾಮನಗೌಡ, ಕೆ.ರಾಮನಗೌಡ ಮತ್ತು ಬೆಂಬಲಿಗರು ಸಂಸದ ಜಿ.ಎಂ.ಸಿದ್ದೇಶ್ವರ್ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು. ಮುಖಂಡರಾದ ನಂಜನಗೌಡ್ರು, ಬಿಜೆಪಿ ಅಧ್ಯಕ್ಷ ಲಕ್ಷ್ಮಣ, ಮುಖಂಡರಾದ ಎಂ.ಪಿ.ನಾಯ್ಕ್, ಸತ್ತೂರು ಹಾಲೇಶ್ ಜೊತೆಯಲ್ಲಿದ್ದರು.

# ಜಗಳೂರು : ಇಂದಿನ ಕಾಂಗ್ರೆಸ್ ಬೆಂಬಲಿತ ವೀರಶೈವ ಲಿಂಗಾಯತರ ಸಭೆಗೆ ಎಸ್ಸೆಸ್



ಜಗಳೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಬೆಂಬಲಿತ ವೀರಶೈವ ಲಿಂಗಾಯತರ ಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಜಗಳೂರಿನ ತರಳಬಾಳು ಕೇಂದ್ರದಲ್ಲಿ ಏರ್ಪಡಿಸಲಾಗಿದೆ. ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಜಗಳೂರು ತಾಲ್ಲೂಕು ವೀರಶೈವ ಮಹಾಸಭಾದ ಅಧ್ಯಕ್ಷ ಜೆ.ಎನ್.ಶಿವನಗೌಡ, ಪ್ರಧಾನ ಕಾರ್ಯದರ್ಶಿ ವೈ.ಎನ್.ಮಂಜುನಾಥ್ ತಿಳಿಸಿದ್ದಾರೆ.

## 19ನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಯಜಮಾನ ಕಂದನಕೋವಿ ಶರಣಪ್ಪ**

ನೀವು ನಮ್ಮನ್ನಗಲಿ
ಇಂದಿಗೆ 19 ವರ್ಷಗಳಾದವು,
ನೀವು ಹಾಕಿ ಕೊಟ್ಟ
ಮಾರ್ಗದರ್ಶನ, ಆದರ್ಶಗಳು
ನಮಗೆ ದಾರಿ ದೀಪ.
ಸದಾ ನಿಮ್ಮ ಸ್ಮರಣೆಯಲ್ಲಿರುವ:

* ಪತ್ನಿ : ಶ್ರೀಮತಿ ಗೌರಮ್ಮ
* ಶ್ರೀಮತಿ ಶೋಭಾ, ಶ್ರೀ ವಾಗೀಶ ಪಂಡಿತಾರಾಧ್ಯ, ಅಮೇರಿಕಾ.
* ಶ್ರೀಮತಿ ಶ್ರೀ ಡಾ. ಕೆ.ಎಸ್. ಗಂಗಾಧರ, ಪ್ರಾಂಶುಪಾಲರು, ದಾವಣಗೆರೆ.
* ಶ್ರೀಮತಿ ಸೌಮ್ಯ ಶ್ರೀ ಕೆ.ಎಸ್. ವೀರಭದ್ರ
* ಶ್ರೀಮತಿ ತಾರಾ ಶ್ರೀ ಸುರೇಶ ನಾಗನ ಗೌಡರ, ಗೋವಾ
* ಚಿ|| ಆದಿತ್ಯಾ * ಕು|| ತೃಪ್ತಿ * ಚಿ|| ವೀರೇಶ್ * ಕು|| ಯಶಸ್ವಿ * ಕು. ಭುವನ
* ಶ್ರೀಮತಿ ಶ್ರೀ ಕೆ.ಬಿ. ಮುದ್ದಪ್ಪ, ನಿ.ಸ. ನಿರ್ದೇಶಕರು, ಕಂದನಕೋವಿ.
* ಶ್ರೀಮತಿ ಶ್ರೀ ಪಾಟೀಲ ಉದಯಕುಮಾರ ಹಾಗೂ ಸಹೋದರರು, ದಾವಣಗೆರೆ.
* ಶ್ರೀಮತಿ ಶ್ರೀ ಎ.ಸಿ. ಜಗದೀಶ್ವರ ವಕೀಲರು, ದಾವಣಗೆರೆ.

ಬಂಧು-ಮಿತ್ರರು ಹಾಗೂ ಬೆಳ್ಳೂಡಿ ವಂಶಸ್ಥರು.

# ಹೊನ್ನಾಳಿ ಕ್ಷೇತ್ರದಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ್ ಅವರು ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ನೇತೃತ್ವದಲ್ಲಿ ಇಂದು ಮತಯಾಚನೆ ನಡೆಸಲಿದ್ದಾರೆ.

ಬೆಳಗ್ಗೆ 10ಕ್ಕೆ ಅರಕೆರೆ, 10.30ಕ್ಕೆ ಹಿರೇಗೋಣಿಗೆರೆ, 11ಕ್ಕೆ ಬೇಲಿಮಲ್ಲೂರು, 11.30ಕ್ಕೆ ಹರಳಹಳ್ಳಿ, 12ಕ್ಕೆ ಗೋವಿನಕೋವಿ, ಮಧ್ಯಾಹ್ನ 12.30ಕ್ಕೆ ಜಿ.ಕಡದಕಟ್ಟೆ, 1ಕ್ಕೆ ಚೀಲೂರು, 1.30 ಕ್ಕೆ ಟಿ. ಗೋಪಗೊಂಡನಹಳ್ಳಿ, 2ಕ್ಕೆ ಕುಂಕುವ ಗ್ರಾಮ ಪಂಚಾಯಿತಿ, 3ಕ್ಕೆ ಒಡೆಯರ ಹತ್ತೂರು, 3.30ಕ್ಕೆ ಗಂಗನಕೋಟೆ, 4ಕ್ಕೆ ಬಸವನಹಳ್ಳಿ, 4.30 ಕ್ಕೆ ಅರಬಗಟ್ಟೆ, 5 ಕ್ಕೆ ಕೆಂಚಿಕೊಪ್ಪ, 5.30 ಕ್ಕೆ ಸೊರಟೂರು, 6 ಕ್ಕೆ ಎಚ್. ಕಡದಕಟ್ಟೆ, 6.30 ಕ್ಕೆ ಮಾಸಡಿ ಗ್ರಾಮಗಳಲ್ಲಿ ಮತ ಯಾಚನೆ ನಡೆಸಲಿದ್ದಾರೆ.

# ಭರಮಸಾಗರ : ತುರ್ತು ಪರಿಸ್ಥಿತಿ ನಿರ್ವಹಣೆ ಉಪನ್ಯಾಸ



ಭರಮಸಾಗರ, ಏ.24- ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಕಾಲೇಜಿನಲ್ಲಿ ಬುಧವಾರ ಪ್ರಥಮ ಚಿಕಿತ್ಸಾ ಕಾರ್ಯಕ್ರಮ ನಡೆಯಿತು.


ಕಾರ್ಯಕ್ರಮದಲ್ಲಿ ರಾಷ್ಟ್ರೀಯ ತರಬೇತುದಾರ ಡಾ. ವಿ.ಎಲ್. ಎಸ್. ಕುಮಾರ್ ಅವರು ತುರ್ತು ಪರಿಸ್ಥಿತಿಗಳ ನಿರ್ವಹಣೆ ಮತ್ತು ಜೀವ ಉಳಿಸುವ ಪ್ರಥಮ ಚಿಕಿತ್ಸೆ ಕುರಿತು ಉಪನ್ಯಾಸ ನೀಡಿದರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಡಾ.ಎ.ಎಂ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ, ನಿರ್ದೇಶಕ ಬಿ.ವಿ. ಧನಂಜಯಮೂರ್ತಿ, ಸಂಯೋಜಕ ಎನ್. ಶಿವಕುಮಾರ, ಕಾಲೇಜಿನ ಪ್ರಾಚಾರ್ಯೆ ಡಾ. ಎಸ್. ಶಶಿಕಲಾ, ಯುವ ರೆಡ್ ಕ್ರಾಸ್ ಘಟಕದ ಅಧಿಕಾರಿ ಕೆ.ಎಸ್. ಸೌಮ್ಯ ಮತ್ತು ಸಿಬ್ಬಂದಿ ಇದ್ದರು.

## ಶ್ರೀಮತಿ ದುಗ್ಗಮ್ಮ ಉಪ್ಪಾರ ನಿಧನ



ದಾವಣಗೆರೆ ಶೇಖರಪ್ಪ ನಗರ 'ಎ' ಬ್ಲಾಕ್ ವಾಸಿ ದಿವಂಗತ ಕಲ್ಲೇದೇವರಪುರ ದೊಡ್ಡ ಅಜ್ಜಪ್ಪನವರ ಪತ್ನಿ ಶ್ರೀಮತಿ ದುಗ್ಗಮ್ಮ ಉಪ್ಪಾರ (78) ಅವರು ದಿನಾಂಕ 24.4.2024ರ ಬುಧವಾರ ಸಂಜೆ 6.58ಕ್ಕೆ ನಿಧನರಾದರು. ಉಪ್ಪಾರ ಸಮಾಜದ ಮುಖಂಡ ಕೆ.ಎ.ಪಾಪಣ್ಣ ಸೇರಿದಂತೆ 3 ಗಂಡು, 5 ಜನ ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.4.2024ರ ಗುರುವಾರ ಮಧ್ಯಾಹ್ನ 2.30ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

## ಹನುಮನಹಳ್ಳಿ ಗೌಡರ ಜಯಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಬ್ಬೂರು ಗ್ರಾಮದ ವಾಸಿ ಹನುಮನಹಳ್ಳಿ ಗೌಡರ ಜಯಪ್ಪ (97) ಅವರು ದಿನಾಂಕ 24.4.2024ರ ಬುಧವಾರ ರಾತ್ರಿ 7 ಗಂಟೆಗೆ ನಿಧನರಾದರು. ಮೂವರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 25.04.2024ರ ಗುರುವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮವಾದ ಕಬ್ಬೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

# ಮಠಗಳು, ಗುರುಗಳಿಂದ ಸಂಸ್ಕಾರ ಲಭಿಸಲಿದೆ



**ಐರಣಿ ಮನಿ ಮಠದ ಕಾರ್ಯಕ್ರಮದಲ್ಲಿ ಐಮಂಗಲ ವಿರಕ್ತ ಮಠದ ಶ್ರೀ ಹರಳಯ್ಯ ಸ್ವಾಮೀಜಿ**

ರಾಣೇಬೆನ್ನೂರು, ಏ.24- ಮನುಷ್ಯರು, ಮೂಲಭೂತವಾದಿ ಗಳಿಂದ ದೇವರು-ಧರ್ಮಗಳ ಹೆಸರಿನಲ್ಲಿ ಗುಲಾಮತನಕ್ಕೆ ಸಿಲುಕುತ್ತಾರೆ ಎಂದು ಐಮಂಗಲ ವಿರಕ್ತ ಮಠದ ಶ್ರೀ ಹರಳಯ್ಯ ಸ್ವಾಮೀಜಿ ನುಡಿದರು.

ಐರಣಿ ಮನಿ ಮಠದ ಗಜದಂಡ ಶ್ರೀಗಳ ಪಟ್ಟಾಭಿಷೇಕ, ವಾರ್ಷಿಕೋ ತ್ಸವ ಹಾಗೂ ಮುಪ್ಪಿನಪ್ಪಜ್ಜನ ನೂತನ ರಥೋತ್ಸವದಲ್ಲಿ ಶ್ರೀಗಳು ಉಪದೇಶ ನೀಡಿದರು.

ದೇವರಿಂದ ಮನುಷ್ಯನಿಗೆ ಸಂಸ್ಕಾರ ಸಿಗದು. ಗುರುಗಳು ಹಾಗೂ ಮಠಗಳು ಸಂಸ್ಕಾರ ಕಲಿಸುವ ಪ್ರಯತ್ನ ಮಾಡುತ್ತವೆ ಎಂದು ಹೇಳಿದರು.

ಸಂಸ್ಕಾರ ಇಲ್ಲದವ ದೇವರು, ಧರ್ಮದ ಮತ್ತಿನಲ್ಲಿ ಕೊಲೆ, ಸುಲಿಗೆಯ ಚಟುವಟಿಕೆಯಲ್ಲಿ ತೊಡಗುತ್ತಾನೆ. ಜಗತ್ತಿನಲ್ಲಿ ಇಂತಹ ಮತ್ತಿನಲ್ಲಿಯೇ ಅನೇಕ ಮಹಾ ಯುದ್ಧಗಳು ನಡೆದಿವೆ. ಆದ್ದರಿಂದ ಜನರು ಆಷಾಢಭೂತಿಗಳಾಗದೆ ಉತ್ತಮ ಬದುಕು ಕಟ್ಟಿಕೊಳ್ಳಿ ಎಂದು ಬೋಧಿಸಿದರು.

ಮನಿಮಠದ ಗಜದಂಡ ಶ್ರೀಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಶ್ರೀಗಳು ಹೊಳೆಮಠದಿಂದ ತಮ್ಮನ್ನು ಹೊರಹಾಕಿದ ಸಂದರ್ಭ ನೆನೆಪಿಸಿಕೊಂಡು ವೈಭವದತ್ತ ಸಾಗುತ್ತಿರುವ ಈಗಿನ ಮಠದ ಅಭಿವೃದ್ಧಿಗೆ ಭಕ್ತರು ನೀಡುತ್ತಿರುವ ಸಹಾಯ,ಸಹಕಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಮುಪ್ಪಿನಪ್ಪಜ್ಜನ ಆತ್ಮದ ಬೆಳಕು ಮಠದ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ರಥೋತ್ಸವದಲ್ಲಿ ಶಾಸಕ ಪ್ರಕಾಶ ಕೋಳಿವಾಡ ಮತ್ತು ಮಾಜಿ ಶಾಸಕ ಅರುಣ ಕುಮಾರ್ ಪೂಜಾರ ಭಾಗವಹಿಸಿದ್ದರು.

ಗಜದಂಡ ಶ್ರೀಗಳ 31ನೇ ಪಟ್ಟಾಭಿಷೇಕ ವಾರ್ಷಿಕೋತ್ಸವದ ಸ್ಮರಣೆಗೆ ಬೇಲೂರಿನ ಹನುಮಂತಪ್ಪ ಚಳಗೇರಿ ಶ್ರೀಗಳ ತುಲಾಭಾರ ನೆರವೇರಿಸಿದರು ಮತ್ತು ಐದು ಜೊತೆ ನೂತನ ವಧು-ವರರು ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರು.

ಡಾ. ರವಿಶಂಕರ್ ಸ್ವಾಮೀಜಿ, ಶ್ರೀ ಜಯದೇವಿ ತಾಯಿ, ದಾವಣಗೆರೆಯ ಹನುಮಂತಪ್ಪ ಕ್ಷೀರಸಾಗರ, ಸಿದ್ದಾರೂಢ ಟ್ರಸ್ಟ್, ಸಿದ್ದನಗೌಡ ಹಿರೇಬಿದರಿ ಇದ್ದರು.

ಬಸವರಾಜ ಹೊನ್ನಾಳಿ ಸ್ವಾಗತಿಸಿದರು. ಕೊಟ್ರಪ್ಪ ನಿರೂಪಿಸಿದರು.

# ಸಾವಿನ ನಂತರವೂ ಕಾಂಗ್ರೆಸ್ ಲೂಟಿ

**(1ನೇ ಪುಟದಿಂದ)** ಅಮೆರಿಕ ರೀತಿಯಲ್ಲಿ ಭಾರತದಲ್ಲೂ ಪಿತ್ರಾರ್ಜಿತ ತೆರಿಗೆ ಹೇರಬೇಕು ಎಂದು ಕಾಂಗ್ರೆಸ್‌ನ ಅನಿವಾಸಿ ಭಾರತೀಯ ವಿಭಾಗದ ಅಧ್ಯಕ್ಷ ಪಿತ್ರೋಡಾ ಸಲಹೆ ನೀಡಿದ್ದರು.

ಈಗ ಕಾಂಗ್ರೆಸ್ ಕೈ ನಿಮ್ಮ ಮಕ್ಕಳ ಆಸ್ತಿ ಮೇಲೆ ಬಿದ್ದಿದೆ. ಅವರು ನಿಮ್ಮ ಮಕ್ಕಳ ಹಕ್ಕುಗಳನ್ನೂ ಕಸಿಯಲು ಬಯಸಿದ್ದಾರೆ ಎಂದು ಮೋದಿ ಆರೋಪಿಸಿದರು.

ಮಧ್ಯಮ ವರ್ಗದ ಜನರು, ಕಷ್ಟಪಟ್ಟು ಗಳಿಸುವವರ ಮೇಲೆ ಹೆಚ್ಚು ತೆರಿಗೆ ಹೇರಬೇಕು ಎಂದು ಈ ಹಿಂದೆ ಪಿತ್ರೋಡಾ ಹೇಳಿದ್ದರು. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪಿತ್ರಾರ್ಜಿತ ತೆರಿಗೆ ಹೇರುವ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ನೀವು ಜೀವಂತವಾಗಿರುವವರೆಗೂ ಕಾಂಗ್ರೆಸ್ ನಿಮ್ಮ ಮೇಲೆ ಹೆಚ್ಚು ತೆರಿಗೆ ಹೇರಿ ಹೊಡೆತ ನೀಡಲಿದೆ. ನೀವು ಇಲ್ಲದಾಗಲೂ ಪಿತ್ರಾರ್ಜಿತ ತೆರಿಗೆ ಹೇರಲಿದೆ ಎಂದು ಮೋದಿ ಆರೋಪಿಸಿದರು.

ಇವರು ಸಂಪೂರ್ಣ ಕಾಂಗ್ರೆಸ್ ಪಕ್ಷವನ್ನು ಸ್ವಂತ ಆಸ್ತಿಯಂತೆ ತಮ್ಮ ಮಕ್ಕಳಿಗೆ ನೀಡುತ್ತಾ ಬಂದಿದ್ದಾರೆ. ಆದರೆ, ಸಾಮಾನ್ಯ ಭಾರತೀಯ ತಮ್ಮ ಮಕ್ಕಳಿಗೆ ಆಸ್ತಿ ನೀಡಬಾರದು ಎಂದು ಬಯಸಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

## ಮರು ಹಂಚಿಕೆ ಬಗ್ಗೆ ಮಾತಿಲ್ಲ : ಸ್ಪಷ್ಟನೆ

**ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಆಸ್ತಿ ಮರು ಹಂಚಿಕೆ ಬಗ್ಗೆ ಪ್ರಸ್ತಾಪ ಮಾಡಿಲ್ಲ ಎಂದು ಪಕ್ಷ ಸ್ಪಷ್ಟನೆ ನೀಡಿದೆ.**

**ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಮಾಧ್ಯಮ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಪಿತ್ರಾರ್ಜಿತ ತೆರಿಗೆ ಜಾರಿಗೆ ತರುವ ಯಾವುದೇ ಯೋಜನೆ ಕಾಂಗ್ರೆಸ್ ಪಕ್ಷಕ್ಕಿಲ್ಲ. ಹಾಗೆ ನೋಡಿದರೆ 1985 ರಲ್ಲಿ ಆಗಿನ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅವರು ಎಸ್ಟೇಟ್ ಡ್ಯೂಟಿ ತೆಗೆದು ಹಾಕಿದ್ದರು ಎಂದಿದ್ದಾರೆ.**

**ಮತ್ತೊಂದೆಡೆ ಆಗ ಬಿಜೆಪಿಯ ಹಣಕಾಸು ಖಾತೆ ರಾಜ್ಯ ಸಚಿವರಾಗಿದ್ದ ಜಯಂತ್ ಸಿನ್ಹಾ ಅವರು ಪಿತ್ರಾರ್ಜಿತ ತೆರಿಗೆ ಜಾರಿಗೆ ತರಲು ಬಯಸಿದ್ದರು. ಮೋದಿ ಸರ್ಕಾರ ಇದೇ ತೆರಿಗೆ ಜಾರಿಗೆ ತರಲು ಬಯಸಿದ ಬಗ್ಗೆ 2017ರಲ್ಲಿ ವರದಿಗಳು ಬಂದಿದ್ದವು. 2018ರಲ್ಲಿ ಆಗಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಪಿತ್ರಾರ್ಜಿತ ತೆರಿಗೆ ಬಗ್ಗೆ ಪ್ರಸ್ತಾಪಿಸಿದ್ದರು ಎಂದಿದ್ದಾರೆ. 2019ರಲ್ಲೂ ಮೋದಿ ಸರ್ಕಾರ ಪಿತ್ರಾರ್ಜಿತ ತೆರಿಗೆ ಜಾರಿಗೆ ತರಲು ಮುಂದಾದ ವರದಿಗಳು ಬಂದಿದ್ದವು ಎಂದೂ ಅವರು ಹೇಳಿದ್ದಾರೆ.**

## ಹೇಳಿಕೆ ತಿರುಚಲಾಗಿದೆ

**ಅಮೆರಿಕದ ಪಿತ್ರಾರ್ಜಿತ ಆಸ್ತಿ ಕುರಿತು ನೀಡಿರುವ ವೈಯಕ್ತಿಕ ಹೇಳಿಕೆಯನ್ನು ತಿರುಚಲಾಗುತ್ತಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಪ್ರಣಾಳಿಕೆ ಕುರಿತು ಸುಳ್ಳು ಹರಡುತ್ತಿದ್ದಾರೆ ಎಂದು ಅನಿವಾಸಿ ಭಾರತೀಯ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಹೇಳಿದ್ದಾರೆ. ಟಿ.ವಿ.ಯಲ್ಲಿ ಸಂದರ್ಶನ ನೀಡುವಾಗ ಪಿತ್ರಾರ್ಜಿತ ತೆರಿಗೆಗೆ ಸಂಬಂಧಿಸಿದಂತೆ ಅಮೆರಿಕದ ಉದಾಹರಣೆ ನೀಡಿದ್ದೇನೆ. ನಾನು ವಾಸ್ತವವನ್ನೂ ಹೇಳಬಾರದೇ? ಈ ಎಲ್ಲ ವಿಷಯಗಳ ಬಗ್ಗೆ ಚರ್ಚೆಯಾಗಬೇಕು ಎಂದಿದ್ದೇನೆ. ಇದಕ್ಕೂ ಕಾಂಗ್ರೆಸ್ ಪಕ್ಷದ ನೀತಿಗೂ ಸಂಬಂಧವಿಲ್ಲ ಎಂದಿದ್ದಾರೆ.**

## ಅನ್ಸಾರಿ ಒಳಾಂಗಗಳಲ್ಲಿ ವಿಷ ಪತ್ತೆಯಿಲ್ಲ

ಲಖ್ನೌ, ಏ. 24 - ಭೂಗತ ಹಾಗೂ ರಾಜಕಾರಣಿ ಮುಕ್ತಾರ್ ಅನ್ಸಾರಿಯ ಒಳಾಂಗಗಳಲ್ಲಿ ವಿಷದ ಅಂಶ ಕಂಡುಬಂದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಂದಾ ಜೈಲಿನಲ್ಲಿದ್ದ ಅನ್ಸಾರಿ ಮಾರ್ಚ್ 28ರಂದು ಮೃತಪಟ್ಟಿದ್ದರು. ವಿಷ ಪ್ರಾಶನದಿಂದ ಸಾವು ಸಂಭವಿಸಿದೆ ಎಂದು ಕುಟುಂಬದವರು ಆರೋಪಿಸಿದ್ದರು.

ಅನ್ಸಾರಿ ಮರಣೋತ್ತರ ಪರೀಕ್ಷೆಯ ವರದಿ ಪ್ರಕಾರ, ಹೃದಯಾಘಾತದಿಂದ ಸಾವು ಸಂಭವಿಸಿದೆ. ಆದರೂ, ಕುಟುಂಬದವರು ಜೈಲಿನಲ್ಲಿ ನಿಧಾನ ವಿಷ ನೀಡಲಾಗಿದೆ ಎಂದು ಆರೋಪಿಸಿದ್ದರು.

ಈ ಹಿನ್ನೆಲೆಯಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ವರದಿ ಪಡೆಯಲಾಗಿತ್ತು. ಒಳಗಾಂಗಗಳಲ್ಲಿ ವಿಷದ ಪತ್ತೆಯಾಗಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಲಿವರ್, ಹೊಟ್ಟೆ ಇತ್ಯಾದಿ ಒಳ ಅಂಗಗಳ ಮಾದರಿ ಪಡೆದು ಪರೀಕ್ಷೆ ನಡೆಸಲಾಗಿತ್ತು. ಆದರೆ, ಮರಣೋತ್ತರ ಪರೀಕ್ಷೆಯನ್ನಾಗಲೀ, ವಿಧಿ ವಿಜ್ಞಾನ ಪರೀಕ್ಷೆಯನ್ನಾಗಲೀ ನಂಬುವುದಿಲ್ಲ. ತಪ್ಪು ಮಾದರಿಯನ್ನು ಪರೀಕ್ಷೆಗೆ ಕಳಿಸಲಾಗಿದೆ ಎಂದು ಅನ್ಸಾರಿ ಸಹೋದರ ಅಫ್ಜಲ್ ಆರೋಪಿಸಿದ್ದಾರೆ.

ಅನ್ಸಾರಿ ವಿರುದ್ಧ 60ಕ್ಕೂ ಹೆಚ್ಚು ಅಪರಾಧಿಕ ಪ್ರಕರಣಗಳಿವೆ. 2005ರಿಂದ ಉತ್ತರ ಪ್ರದೇಶ ಹಾಗೂ ಪಂಜಾಬ್ ಜೈಲಿನಲ್ಲಿರಿಸಲಾಗಿದೆ. ಎಂಟು ಪ್ರಕರಣಗಳಲ್ಲಿ ವಿವಿಧ ನ್ಯಾಯಾಲಯಗಳಿಂದ ಶಿಕ್ಷೆಯಾಗಿದೆ. ಕಳೆದ ವರ್ಷ ಉತ್ತರ ಪ್ರದೇಶ ಪ್ರಕಟಿಸಿದ ಭೂಗತರ ಹೆಸರಿನಲ್ಲಿ ಅನ್ಸಾರಿ ಹೆಸರೂ ಇತ್ತು.

## ವಿನಯ್‌ಗೆ ಬೆಂಬಲ : ಮಲ್ಲಿಕಾರ್ಜುನ್

ದಾವಣಗೆರೆ, ಏ. 24- ಲೋಕಸಭಾ ಕ್ಷೇತ್ರದ ಜಿ.ಬಿ. ವಿನಯ್ ಕುಮಾರ್ ಅವರನ್ನು ಬೆಂಬಲಿಸುವುದಾಗಿ ಗುಮ್ಮನೂರು ಕೆ.ಎಂ. ಮಲ್ಲಿಕಾರ್ಜುನಪ್ಪ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಎಂ.ನಾಗಪ್ಪ ಬೇಲಿಮಲ್ಲೂರು, ಸಣ್ಣ ಸಿದ್ದಪ್ಪ ಹೊನ್ನಾಳಿ, ಡಾ.ಕರಿಬಸಯ್ಯ ಮಠದ ಒಡೆಯರ್, ಹನುಮಂತಪ್ಪ ಹದಡಿ ಇದ್ದರು.

# ನಿರಂತರ ದಬ್ಬಾಳಿಕೆ ಪರಿಣಾಮವೇ ಭೂಮಿ 'ತಾಪ' ಹೆಚ್ಚಲು ಕಾರಣ

### ವಿಶ್ವ ಭೂ ದಿನಾಚರಣೆ ಕಾರ್ಯಕ್ರಮದಲ್ಲಿ ಸಾವಯವ ಕೃಷಿಕ ನೇರ್ಲಿಗಿ ಪ್ರಕಾಶ್



ದಾವಣಗೆರೆ, ಏ. 24- ನಮ್ಮ ಅತಿಯಾದ ಆಸೆಗಳಿಂದ ಭೂಮಿಯ ಮೇಲೆ ನಿರಂತರ ದಬ್ಬಾಳಿಕೆ ಮಾಡಿದ್ದರ ಪರಿಣಾಮವಾಗಿ ಭೂಮಿಯ ತಾಪ ಹೆಚ್ಚಾಗಿ, ಸರಿಯಾದ ಸಮಯಕ್ಕೆ ಮಳೆ ಬೆಳೆಗಳಾಗದೇ, ರೈತ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದು, ರೈತರ ಮಕ್ಕಳು ಕೃಷಿಯಿಂದ ವಿಮುಖರಾಗುತ್ತಿದ್ದಾರೆಂದು ಸಾವಯವ ಕೃಷಿಕ ನೇರ್ಲಿಗಿ ಪ್ರಕಾಶ್ ತಿಳಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಮತ್ತು ಜಿಲ್ಲಾ ಬಾಲಭವನ ಸಮಿತಿ, ಸಂಯುಕ್ತವಾಗಿ ಏರ್ಪಡಿಸಿದ್ದ ವಿಶ್ವ ಭೂ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ, 'ಭೂಮಿ ಉಳಿದರೆ ನಾವೆಲ್ಲ' ವಿಷಯ ಕುರಿತು ಉಪನ್ಯಾಸ ನೀಡಿ ಅವರು ಮಾತನಾಡಿದರು.

ನಿತ್ಯವು ಭೂಮಿಗೆ ವಿಷ ಬೆರೆಸುತ್ತಿದ್ದೇವೆ. ಅತಿಯಾದ ಪ್ಲಾಸ್ಟಿಕ್ ಬಳಕೆ ಭೂಮಿ ಮೇಲಿನ ಜೀವಿಗಳ ನಾಶಕ್ಕೆ ಕಾರಣವಾಗುತ್ತಿದೆ. ಅಭಿವೃದ್ಧಿ ಹೆಸರಿನಲ್ಲಿ ಕಾಡು ದಿನದಿಂದ ದಿನಕ್ಕೆ ಇಂಚಿಂಚು ಸವೆಯುತ್ತಿದೆ. ಅದರ ಪರಿಣಾಮ ಸಕಲ ಜೀವರಾಶಿಗಳ ಮೇಲೆ ಮೂಡುತ್ತಿದೆ. ಅಂತರ್ಜಲದ ಮಟ್ಟ ಪ್ರಪಾತಕ್ಕೆ ಕುಸಿದು, ರೈತರ ಆತ್ಮ ಬಲವೇ ಕಡಿಮೆಯಾಗುತ್ತಿದೆ ಎಂದೂ ಕಾಣದ ಹೊಸ ರೋಗಗಳು ನಮ್ಮನ್ನು ಕಾಡುತ್ತಿವೆ. ನಾವೆಲ್ಲ ಮಾರುಕಟ್ಟೆಯಲ್ಲಿ ವಿಷ ಕೊಂಡುಕೊಳ್ಳುತ್ತಿದ್ದೇವೆ. ಆಹಾರ, ನೀರು, ಮಣ್ಣು, ಗಾಳಿ ಕಲುಷಿತಗೊಂಡು ಸಕಲ ಜೀವರಾಶಿಗಳ ಬದುಕಿಗೆ ಮಾರಕವಾಗಿದೆ. ನಮ್ಮ ಮುಂದಿರುವ ಯುವ ಜನಾಂಗ ಎಚ್ಚೆತ್ತುಕೊಳ್ಳಬೇಕು. ನಾವುಗಳು ದೊಡ್ಡ ಪ್ರಯತ್ನ ಮಾಡಬೇಕಿಲ್ಲ, ಸಣ್ಣ ಸಣ್ಣ ಪ್ರಯತ್ನಗಳ ಮೂಲಕ ಈ ಭೂಮಿಯನ್ನು ರಕ್ಷಿಸುವ ಜವಾಬ್ದಾರಿ ಹೊರಬೇಕಿದೆ.

ಯುವ ಜನತೆ ಕೃಷಿಯ ಕಡೆ ಮತ್ತೇ ಮುಖ ಮಾಡಬೇಕು. ರಾಸಾಯನಿಕ ಮುಕ್ತ, ವಿಷಮುಕ್ತ ಆಹಾರ ಉತ್ಪಾದನೆಯ ಮೂಲಕ ನಮ್ಮ ಆರೋಗ್ಯ ಮತ್ತು ಭೂಮಿಯ ಆರೋಗ್ಯ ಕಾಪಾಡಬೇಕಿದೆ ಎಂದರು. ಸರ್ಕಾರಿ ಕೆಲಸಕ್ಕೆ ಕಾಯದೆ, ಸಹಜ ಕೃಷಿ, ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡು, ಭೂ ತಾಯಿಯ ಒಡಲನ್ನು ತಂಪುಗೊಳಿಸಬೇಕೆಂದು ಯುವ ಜನತೆಗೆ ಕರೆ ನೀಡಿದರು.

ಸಮಾರಂಭವನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಗೌರವಾಧ್ಯಕ್ಷ ಡಾ. ಜೆ.ಬಿ. ರಾಜ್ ಮಾತನಾಡಿ, ನಾವು ಸುಧಾರಣೆಯಾದರೆ, ಸಮಾಜವನ್ನು ಸುಧಾರಿಸುತ್ತೇವೆ. ಸಮಾಜ ಸುಧಾರಣೆಯಾದರೆ ಈ ಭೂಮಿ ಸುಧಾರಣೆಯಾಗುತ್ತದೆ. ಕೈಗಾರಿಕಾ ಕ್ರಾಂತಿಯ ನಂತರ ಇಡೀ ವಿಶ್ವ ನೆಲ, ಜಲ, ಮಾಲಿನ್ಯ ಹೆಚ್ಚಿಸಿ, ಸ್ವೇಚ್ಛೆಯ ಬದುಕನ್ನು ಸಾಗಿಸಿದ್ದರ ಪರಿಣಾಮ ಇಂದು ಅನೇಕ ಸಂಕಟಕ್ಕೆ ಸಿಲುಕಿದ್ದೇವೆ. ವಿಶ್ವದ 194 ರಾಷ್ಟ್ರಗಳು ಒಟ್ಟಾಗಿ ಇಂದು ವಿಶ್ವ ಭೂ ದಿನವನ್ನು ಆಚರಿಸುತ್ತಿದ್ದೇವೆ ಎಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕೆಎಸ್‌ಎಸ್ ಫೌಂಡೇಷನ್ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಕೆ.ಬಸವರಾಜ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಿಶ್ವ ಮಾನವ ಮಂಟಪದ ಸಂಸ್ಥಾಪಕ ಆವರಗೆರೆ ರುದ್ರಮುನಿ, ಕೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಎಸ್.ಚನ್ನಬಸಪ್ಪ ಉಪಸ್ಥಿತರಿದ್ದರು.

ಜಿಲ್ಲಾ ಕರಾವಿಪ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಜಿಲ್ಲಾ ಬಾಲಭವನದ ಕಾರ್ಯಕ್ರಮ ಸಂಯೋಜಕಾರಿ ಎಸ್.ಬಿ.ಶಿಲ್ಪ ಸ್ವಾಗತಿಸಿದರು. ಉಪನ್ಯಾಸಕ ರುದ್ರಮುನಿ ಹಿರೇಮಠ್ ವಂದಿಸಿದರು.

## ದೇವಸ್ಥಾನದ ಅಭಿವೃದ್ಧಿಗೆ ಗೃಹಲಕ್ಷ್ಮಿ ಹಣ ಕಾರ್ಯವನ್ನು ಶ್ಲಾಘಿಸಿದ ಡಾ. ಪ್ರಭಾ



ಹೊನ್ನಾಳಿ, ಏ.24- ತಾಲ್ಲೂಕಿನ ಮಲ್ಲಿಗೇನಹಳ್ಳಿ ಗ್ರಾಮದ ಮಹಿಳೆಯರು ಸರ್ಕಾರ ನೀಡುವ ಗೃಹಲಕ್ಷ್ಮಿ ಹಣದಿಂದ ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಅಭಿವೃದ್ಧಿ ಪಡಿಸಿರುವುದನ್ನು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಶ್ಲಾಘಿಸಿದ್ದಾರೆ.

ಆಂಜನೇಯ ಸ್ವಾಮಿಯ ದೇವಸ್ಥಾನ ಅಭಿವೃದ್ಧಿಗಾಗಿ ಗ್ರಾಮಸ್ಥರು ಮುಂದಾಗಿದ್ದರು. ಆದರೆ ಮಳೆ ಬಾರದೇ ತೊಂದರೆ ಆದ ಕಾರಣ ಗ್ರಾಮದ ಸುಮಾರು 450 ಮಹಿಳೆಯರು ತಮಗೆ ಸರ್ಕಾರದಿಂದ ಪ್ರತಿ ತಿಂಗಳು ರೂ.2000 ಬಂದ ಹಣವನ್ನು ಒಟ್ಟು ಗೂಡಿಸಿ ಸುಮಾರು 9 ಲಕ್ಷ ಹಣವನ್ನು ದೇವಸ್ಥಾನದ ಅಭಿವೃದ್ಧಿಗೆ ನೀಡಿದ್ದಾರೆ.

ಇಂತಹ ಮಹತ್ಕಾರ್ಯ ಮಾಡಿದ ಮಲ್ಲಿಗೇನಹಳ್ಳಿ ಗ್ರಾಮದ ಮಹಿಳೆಯರನ್ನು ಡಾ.ಪ್ರಭಾ ಅವರು ಅಭಿನಂದಿಸಿ ನಿಮ್ಮ ಧಾರ್ಮಿಕ ಸೇವೆಗೆ ನಾನು ಸದಾ ಬೆಂಬಲವಾಗಿರುತ್ತೇನೆ ಎಂದರು.

ನಮ್ಮ ಸರ್ಕಾರ ನೀಡುವ ಹಣದಲ್ಲಿ ಸಾಕಷ್ಟು ಜನರು ವೈಯಕ್ತಿಕವಾಗಿ ಅನುಕೂಲ ಪಡೆದಿದ್ದು, ಈ ಗ್ರಾಮದ ಮಹಿಳೆಯರು ಗ್ರಾಮದ ದೇವಸ್ಥಾನದ ಅಭಿವೃದ್ಧಿಗೆ ಮುಂದಾಗಿರುವುದು ಸಾರ್ಥಕವಾಗಿದೆ. ಇದು ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಇದ್ದಂತೆ ಎಂದರು.

ಮುಂದಿನ ದಿನಗಳಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಲ್ಲಿ ಪ್ರತಿ ಮಹಿಳೆಗೆ ವಾರ್ಷಿಕ ರೂ. 1 ಲಕ್ಷ ನೀಡಲಾಗುವುದು. ಇದರಿಂದ ನಿಮ್ಮ ವೈಯಕ್ತಿಕ ಜೀವನಕ್ಕೂ, ಸಾಮಾಜಿಕ ಸೇವೆಗೂ ಅನುಕೂಲವಾಗಲಿದೆ ಎಂದರು.

## ವಿನಯ್ ಕುಮಾರ್‌ಗೆ ಹಿಂದುಳಿದ ಜನ ಜಾಗೃತಿ ವೇದಿಕೆ ಬೆಂಬಲ

ದಾವಣಗೆರೆ, ಏ. 24- ಕಾಂತರಾಜ ಆಯೋಗದ ವರದಿಯನ್ನು ಜಾರಿಗೊಳಿಸುವುದಾಗಿ ಭರವಸೆ ನೀಡಿರುವ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರನ್ನು ಬೆಂಬಲಿಸುವುದಾಗಿ ಹಿಂದುಳಿದ ಜನ ಜಾಗೃತಿ ವೇದಿಕೆ ಹೇಳಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಶಿವಮೊಗ್ಗ ಜಿಲ್ಲಾಧ್ಯಕ್ಷ ತೀ.ನ. ಶ್ರೀನಿವಾಸ್, ಲಿಂಗಾಯತ ಮುಖಂಡರು ವರದಿ ಕುರಿತು ಹಗುರವಾಗಿ ಮಾತನಾಡುವುದು ಖಂಡನೀಯ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ಡಾ.ಕರಿಬಸಯ್ಯ ಮಠದ ವಡೆಯರ್, ಆರ್.ಟಿ. ನಟರಾಜ್, ಪ್ರೊ.ಹೆಚ್. ರಾಜಪ್ಪ, ಪರಮೇಶ್ವರಪ್ಪ ಇತರರಿದ್ದರು.

## ಕಾಂಗ್ರೆಸ್ ಕಚೇರಿ ಬಳಿ ಬಿಜೆಪಿ ಪ್ರತಿಭಟನೆ

ನವದೆಹಲಿ, ಏ. 24 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೇಶ ಒಡೆಯುವ ರಾಜಕೀಯ ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ದೆಹಲಿ ಬಿಜೆಪಿ, ಕಾಂಗ್ರೆಸ್ ಪಕ್ಷದ ಕೇಂದ್ರ ಕಚೇರಿ ಬಳಿ ಪ್ರತಿಭಟನೆ ನಡೆಸಿದೆ.

ಕಾಂಗ್ರೆಸ್ ಪಕ್ಷದ ಲೋಕಸಭಾ ಚುನಾವಣೆಯ ಪ್ರಣಾಳಿಕೆಯು ದೇಶದ ಸಂಸ್ಕೃತಿಗೆ ಮಾಡಿರುವ ಅವಮಾನ ಎಂದೂ ಬಿಜೆಪಿ ಹೇಳಿದೆ.

# ಅನುಮಾನದ ಆಧಾರದ ಮೇಲೆ ಚುನಾವಣೆ ಬದಲಿಸಲಾಗದು : ಸುಪ್ರೀಂ ಕೋರ್ಟ್

ನವದೆಹಲಿ, ಏ. 24 – ಮತಯಂತ್ರಗಳ ಕುರಿತ ಕೇವಲ ಅನುಮಾನದ ಆಧಾರದ ಮೇಲೆ ಚುನಾವಣೆ ನಿಯಂತ್ರಿಸಲು ಇಲ್ಲವೇ ನಿರ್ದೇಶನಗಳನ್ನು ಕೊಡಲು ಸಾಧ್ಯವಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮತ ಯಂತ್ರಗಳನ್ನು ತಿರುಚಲಾಗಿದೆ ಎಂದು ಆರೋಪಿಸಿ ದಾಖಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ಟಿಪ್ಪಣಿ ಮಾಡಿದೆ. ನ್ಯಾಯಾಲಯ ಈ ಕುರಿತ ಆದೇಶವನ್ನು ಕಾಯ್ದಿರಿಸಿದೆ.

ಮತ ಯಂತ್ರಗಳಲ್ಲಿನ ವಿವಿಪ್ಯಾಟ್‌ನ ಎಲ್ಲಾ ಚೀಟಿಗಳನ್ನು ಎಣಿಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರನ್ನು ಒಳಗೊಂಡ ಪೀಠ ವಿಚಾರಣೆ ಪೂರ್ಣಗೊಳಿಸಿದೆ. ವಿಚಾರಣೆಯ ವೇಳೆ ನ್ಯಾಯಾಲಯ ಚುನಾವಣಾ ಆಯೋಗದಿಂದ ಹಲವಾರು ವಿವರಣೆಗಳನ್ನೂ ಪಡೆದಿದೆ.

ಮತ ಯಂತ್ರಗಳ ಕಾರ್ಯನಿರ್ವಹಣೆ, ಅದರಲ್ಲಿನ ಮೈಕ್ರೋ ಕಂಟ್ರೋಲರ್‌ಗಳನ್ನು ರೀಪ್ರೋಗ್ರಾಂ ಮಾಡಬಹುದೇ ಎಂಬುದೂ ಸೇರಿದಂತೆ ಐದು ಪ್ರಶ್ನೆಗಳಿಗೆ ವಿವರಣೆ ಪಡೆದಿದೆ.

ಚುನಾವಣಾ ಆಯೋಗದ ಹಿರಿಯ ಉಪ ಆಯುಕ್ತ ನಿತೇಶ್ ಕುಮಾರ್ ಯಾದವ್ ಅವರು ನ್ಯಾಯಾಲಯಕ್ಕೆ ವಿವರಣೆ ನೀಡಿದ್ದಾರೆ. ಮೈಕ್ರೋಕಂಟ್ರೋಲರ್‌ಗಳನ್ನು ಒಂದು ಬಾರಿ ಮಾತ್ರ ಪ್ರೋಗ್ರಾಂ ಮಾಡಬಹುದು ಎಂದವರು ಹೇಳಿದರು.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಘಟನೆಯ ಪರವಾಗಿ ಹಾಜರಿದ್ದ ವಕೀಲ ಪ್ರಶಾಂತ್ ಭೂಷಣ್, ಚುನಾವಣಾ ಆಯೋಗದ ಅಧಿಕಾರಿಯ ಮಾಹಿತಿ ಪೂರ್ಣ ಸರಿ ಅಲ್ಲ. ಖಾಸಗಿ ಸಂಸ್ಥೆಯೊಂದರ ಮಾಹಿತಿಯ ಪ್ರಕಾರ, ಮತ ಯಂತ್ರಕ್ಕೆ ಚಿಹ್ನೆಗಳನ್ನು ಅಪ್‌ಲೋಡ್ ಮಾಡುವಾಗ ಕುತಂತ್ರಾಂಶವನ್ನು ಸುಲಭವಾಗಿ ಅಪ್ಲೋಡ್ ಮಾಡಬಹುದು ಎಂದರು.

ಆಗ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಖನ್ನಾ, ನ್ಯಾಯಾಲಯವು ಚುನಾವಣಾ ಆಯೋಗ ಸಲ್ಲಿಸುವ ಮಾಹಿತಿಯನ್ನು ಅವಲಂಬಿಸಬೇಕಾಗುತ್ತದೆ. ಈ ಬಗ್ಗೆ ನಿಮಗೆ ಪೂರ್ವಾಗ್ರಹವಿದ್ದರೆ, ನಾವು ಸಹಾಯ ಮಾಡಲು ಸಾಧ್ಯವಿಲ್ಲ. ನಿಮ್ಮ ಯೋಚನಾ ರೀತಿ ಬದಲಿಸಲು ಸಾಧ್ಯವಿಲ್ಲ ಎಂದರು.

ನಾವು ಶಂಕೆಯ ಆಧಾರದ ಮೇಲೆ ನಿರ್ದೇಶನ ನೀಡಲು ಸಾಧ್ಯವಾಗದು. ಹಿಂದೆಂದೂ ಮತಯಂತ್ರ ತಿರುಚಿದ ಘಟನೆ ನಡೆದಿಲ್ಲ ಎಂದು ನೀವೇ ತಿಳಿಸಿರುವ ಮಾಹಿತಿಯಲ್ಲಿ ಹೇಳಲಾಗಿದೆ ಎಂದೂ ನ್ಯಾಯಮೂರ್ತಿ ಹೇಳಿದರು.

ಮತ ಯಂತ್ರಗಳಲ್ಲಿ ಏನಾದರೂ ತಪ್ಪಾದಾಗ ಮಾತ್ರ ಕಾನೂನು ಕ್ರಮ ತೆಗೆದುಕೊಳ್ಳಲು ಸಾಧ್ಯ. ನೀವು ಮತ ಚೀಟಿ ವ್ಯವಸ್ಥೆಗೆ ಮರಳಬೇಕೆಂದು ಬಯಸುತ್ತಿದ್ದೀರಿ. ಈ ನ್ಯಾಯಾಲಯ ಈಗಿರುವ ಮತಯಂತ್ರ ವ್ಯವಸ್ಥೆಯನ್ನು ಬಲಗೊಳಿಸಲು ಮಾತ್ರ ನಿರ್ದೇಶನ ನೀಡಲು ಸಾಧ್ಯ ಎಂದರು.

## ಎಂ.ಹಾಲೇಶ್, ಕರಿಗಾರ ಬಸಪ್ಪ ಬಿಜೆಪಿಗೆ



ದಾವಣಗೆರೆ,ಏ.24 ಮಹಾನಗರ ಪಾಲಿಕೆ ಮಾಜಿ ಸದಸ್ಯ ಗಾಂಧಿನಗರದ ಎಂ.ಹಾಲೇಶ್ ಮತ್ತು ನಗರಸಭೆ ಮಾಜಿ ಸದಸ್ಯ ಕರಿಗಾರ ಬಸಪ್ಪ ಮತ್ತು ಬೆಂಬಲಿಗರು ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.

ಸಂಸದ ಜಿ.ಎಂ.ಸಿದ್ದೇಶ್ವರ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಕೊಂಡಜ್ಜಿ ಜಯಪ್ರಕಾಶ್, ಮುರುಗೇಶ್ ಆರಾಧ್ಯ, ಕುರುಬರಕೇರಿ ಈರಣ್ಣ, ಗಾಂಧಿನಗರದ ಅಂಜಿನಪ್ಪ, ಹನುಮಂತಪ್ಪ, ರಾಜಕುಮಾರ್, ಪ್ರಜ್ವಲ್, ಜಿ.ಎಸ್.ಗಂಗಾಧರ್, ಉತ್ಸವ್, ರಾಕೇಶ್, ಮಂಜುನಾಥ್ ಇತರರು ಇದ್ದರು.

## ದೇಶ ಭಕ್ತರೆನಿಸಿಕೊಂಡವರು ಜಾತಿ ಗಣತಿಗೆ ಹೆದರುತ್ತಿದ್ದಾರೆ : ರಾಗಾ

ನವದೆಹಲಿ, ಏ. 24 - ದೇಶ ಭಕ್ತರೆನಿಸಿಕೊಂಡವರು ಜಾತಿ ಗಣತಿಗೆ ಹೆದರುತ್ತಿದ್ದಾರೆ. ಆದರೆ, ಯಾವುದೇ ಶಕ್ತಿಯಿಂದ ಜಾತಿ ಗಣತಿ ತಡೆಯಲಾಗದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಇಲ್ಲಿ ಆಯೋಜಿಸಲಾಗಿದ್ದ ಸಾಮಾಜಿಕ ನ್ಯಾಯ ಸಮ್ಮೇಳನದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ನನಗೆ ಜಾತಿಯಲ್ಲಿ ಆಸಕ್ತಿ ಇಲ್ಲ, ಆದರೆ ನ್ಯಾಯದಲ್ಲಿ ಆಸಕ್ತಿ ಇದೆ. ಅನ್ಯಾಯ ಎದುರಿಸುತ್ತಿರುವ ಶೇ.90ರಷ್ಟು ಜನರಿಗೆ ನ್ಯಾಯ ನೀಡುವುದು ನನ್ನ ಜೀವನದ ಗುರಿ ಎಂದಿದ್ದಾರೆ.

ನಮ್ಮ ಸರ್ಕಾರ ರಚನೆಯಾದ ತಕ್ಷಣ ಜಾತಿ ಗಣತಿ ನಡೆಸಲಾಗುವುದು ಎಂದವರು ಹೇಳಿದ್ದಾರೆ.

ಮೋದಿ ಸರ್ಕಾರ ಆಯ್ದ ಉದ್ಯಮಿಗಳಿಗೆ 16 ಲಕ್ಷ ಕೋಟಿ ರೂ.ಗಳನ್ನು ನೀಡಿದೆ. ಕಾಂಗ್ರೆಸ್ ಪಕ್ಷ ಶೇ.90ರಷ್ಟು ಜನರಿಗೆ ಹಣ ಮರಳಿಸಲಿದೆ ಎಂದೂ ರಾಹುಲ್ ಗಾಂಧಿ ಹೇಳಿದರು.

## ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಿ ಸಂಸತ್‌ಗೆ ಕಳುಹಿಸಲು ಎಸ್ಸೆಸ್ಸೆಂ ಮನವಿ



ದಾವಣಗೆರೆ,ಏ.24- ವಿದ್ಯಾವಂತೆ, ಸರಳ ಸಜ್ಜನಿಕೆಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಅವರನ್ನು ಗೆಲ್ಲಿಸಿ ಲೋಕಸಭೆ ಕಳುಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ಮನವಿ ಮಾಡಿದರು.

ನಗರದ ಭಾರತ್ ಕಾಲೋನಿಯ ಜಗಳೂರು ಮಾಲಿಂಗಪ್ಪ ಮಿಲ್ ಆವರಣದಲ್ಲಿ ಮತ ಯಾಚನೆ ಮಾಡಿ ಅವರು ಮಾತನಾಡಿ ದರು.

ಬಡವರ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ಪಣತೊಟ್ಟಿದೆ. ದೇಶದ ಅಭಿವೃದ್ಧಿ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ, ಸರ್ಕಾರದ ಗ್ಯಾರಂಟಿ ಯೋಜನೆಗಳೇ ಇದಕ್ಕೆ ಸಾಕ್ಷಿ ಎಂದ ಸಚಿವರು, ಮಹಾಲಕ್ಷ್ಮಿ ಯೋಜನೆಯಿಂದ ಇನ್ನಷ್ಟು ಬಡವರಿಗೆ ಹಣ ಉಳಿತಾಯಕ್ಕೆ ಸಹಕಾರಿಯಾಗಲಿದೆ ಎಂದರು.

ಇಲ್ಲಿನ ಮುಖಂಡರುಗಳು ಯಾವುದೇ ವೈಮನಸ್ಸುಗಳಿದ್ದರೂ ಅವುಗಳನ್ನು ದೂರವಿಟ್ಟು, ಜಿಲ್ಲೆಯ ಅಭಿವೃದ್ಧಿಗಾಗಿ ಪಣತೊಡಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಕುಟುಂಬ ಸಮೇತರಾಗಿ ಮತಗಟ್ಟೆಗೆ ಬಂದು ಮತ ನೀಡಿ ಗೆಲ್ಲಿಸಿ, ಹೆಚ್ಚು ಹೆಚ್ಚು ಅನುದಾನ ತರಲು ಸಹಕರಿಸಿ ಎಂದರು.

ಈ ಸಂದರ್ಭದಲ್ಲಿ ಹರಪನಹಳ್ಳಿಯ ಮಲ್ಲಿಕಾರ್ಜುನ ಸ್ವಾಮಿ, ಡಿ.ಬಸವರಾಜ್, ಕೆ.ಜಿ. ಚಿದಾನಂದ, ಮಹಾನಗರ ಪಾಲಿಕೆ ಸದಸ್ಯೆ ಮೀನಾಕ್ಷಿ ಜಗದೀಶ್, ಹರಿಹರದ ವಾಗೀಶ್ ಸ್ವಾಮಿ, ಕಿರುವಾಡಿ ಸೋಮಣ್ಣ, ಕೆ.ಚಮನ್ ಸಾಬ್ ಇತರರು ಉಪಸ್ಥಿತರಿದ್ದರು.

## ಚುನಾವಣೆಗೆ ಅಡ್ಡಿಪಡಿಸಲು ಐ.ಟಿ. ದಾಳಿ : ಡಿಕೆಶಿ

ಕನಕಪುರ, ಏ. 24 – ತಮ್ಮ ತೇಜೋವಧೆಗಾಗಿ ಹಾಗೂ ಚುನಾವಣಾ ಪ್ರಚಾರಕ್ಕೆ ಅಡ್ಡಿಪಡಿಸಲು ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರ ಮೇಲೆ ಆದಾಯ ತೆರಿಗೆ ದಾಳಿ ನಡೆಸಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿಯೂ ಆಗಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.

ಆದಾಯ ತೆರಿಗೆ ಇಲಾಖೆ ಉದ್ದೇಶಪೂರ್ವಕವಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಮೇಲೆ ದಾಳಿ ನಡೆಸುತ್ತಿದೆ. ಅವರು ಚುನಾವಣಾ ಪ್ರಚಾರ ನಡೆಸದಂತೆ ತಡೆಯುತ್ತಿದೆ ಎಂದವರು ಹೇಳಿದ್ದಾರೆ.

ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳು ಹಣ ಹಂಚುತ್ತಿಲ್ಲವೇ? ಅವರ ಮೇಲೇಕೆ ದಾಳಿ ನಡೆಯುತ್ತಿಲ್ಲ ಎಂದೂ ಶಿವಕುಮಾರ್ ಪ್ರಶ್ನಿಸಿದ್ದಾರೆ.

## ಚೆನ್ನಮ್ಮ ಮಹೇಶ್ವರಯ್ಯ ಪದವಿ ಪೂರ್ವ ಕಾಲೇಜಿಗೆ ಶೇ.99ರ ಫಲಿತಾಂಶ

ದಾವಣಗೆರೆ, ಏ.24- ಕಳೆದ ಮಾರ್ಚ್ ತಿಂಗಳಿನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಟಿ.ಎಂ ಚಿನ್ನಮ್ಮ ಮಹೇಶ್ವರಯ್ಯ ಮೆಮೋರಿಯಲ್ ಪದವಿ ಪೂರ್ವ ಕಾಲೇಜಿಗೆ ಶೇ.99ರಷ್ಟು ಫಲಿತಾಂಶ ಲಭಿಸಿದೆ.

ಕಲಾ ವಿಭಾಗದ ದೀಕ್ಷಿತಾ ಶೇ.91.66 ಅಂಕ, ಎಚ್. ರೇಖಾ ಶೇ.89.83 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ವಾಣಿಜ್ಯ ವಿಭಾಗದ ಎಂ. ಗಗನಾ ಶೇ.89.83 ಅಂಕ, ಎಸ್.ಜೆ. ಮಾನ್ಯ ಶೇ.87.16 ಅಂಕ ಪಡೆದಿದ್ದಾರೆ.

# ಕಾಯಕದಲ್ಲಿ ಭಕ್ತಿ, ನಂಬಿಕೆ ಇದ್ದಲ್ಲಿ ಯಶಸ್ಸು ನಿಶ್ಚಿತ

## ಯಲವಟ್ಟಿಯ ಕಾರ್ಯಕ್ರಮದಲ್ಲಿ ಯೋಗಾನಂದ ಸ್ವಾಮೀಜಿ ಅಭಿಮತ



ಮಲೇಬೆನ್ನೂರು, ಏ. 24 - ನಾವು ಮಾಡುವ ಕಾಯಕ - ಕೆಲಸದಲ್ಲಿ ಭಕ್ತಿ-ಪ್ರೀತಿ-ಪ್ರೇಮ ಇರಬೇಕು. ಆಗ ಮಾತ್ರ ಆ ಕೆಲಸದಲ್ಲಿ ನೀವು ಯಶಸ್ಸು ಕಾಣಲು ಸಾಧ್ಯ ಎಂದು ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಯಲವಟ್ಟಿ ಶ್ರೀ ಗುರುಸಿದ್ಧಾಶ್ರಮದಲ್ಲಿ ಹಮ್ಮಿಕೊಂಡಿದ್ದ ಯುಗಾದಿ ಅಮಾವಾಸ್ಯೆ ಸತ್ಸಂಗ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ನಾವು ಮಾಡುವ ಕೆಲಸದಿಂದ ಫಲದ ಅಪೇಕ್ಷೆ ಇಟ್ಟುಕೊಳ್ಳಬಾರದು. ನಂಬಿಕೆಯಿಂದ ನಾವು ನಮ್ಮ ಕರ್ತವ್ಯ ಎಂದು ಕೊಂಡು ಮಾಡಿದಾಗ ಭಗವಂತನೇ ನಮಗೆ ಫಲ ನೀಡುತ್ತಾನೆ. ಭಗವಂತನಲ್ಲೂ ನಾವು ಅನುಪಮ - ಅಚಲ ಭಕ್ತಿ ಹೊಂದಿರಬೇಕು. ಏಕೆಂದರೆ ಭಗವಂತನೇ ನಮಗೆ ಬಂಧುವಾಗಿದ್ದಾನೆ. ಜೊತೆಗೆ ಗುರು-ಹಿರಿಯರ, ತಂದೆ-ತಾಯಿಗಳ ಹಾರೈಕೆ ಇದ್ದಲ್ಲಿ ನಮ್ಮ ಬದುಕು ಸಾರ್ಥಕವಾಗುತ್ತೆ ಎಂದು ಸ್ವಾಮೀಜಿ ಹೇಳಿದರು.

ಬದುಕಿನಲ್ಲಿ ಮನುಷ್ಯರನ್ನು ಅಷ್ಟೇ ಅಲ್ಲ, ಪ್ರತಿಯೊಂದು ಜೀವಿಯನ್ನೂ ಪ್ರೀತಿ-ಕರುಣೆ, ಗೌರವದಿಂದ ಕಾಣಬೇಕೆಂದು ಹೇಳಿದ ಸ್ವಾಮೀಜಿ ಅವರು, ಈ ವರ್ಷದ ಯುಗಾದಿ ನಾಡಿಗೆ ಉತ್ತಮ ಮಳೆ-ಬೆಳೆ ತರಲಿ. ಜನರಿಗೆ ಸಮೃದ್ಧಿ ಹಾಗೂ ನೆಮ್ಮದಿ ನೀಡಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಉಪಾಧ್ಯಕ್ಷ ಹನಗವಾಡಿ ಕುಮಾರ್, 'ಕಾಯಕವೇ ಕೈಲಾಸ' ಎಂಬ ಬಸವಣ್ಣನವರ ವಾಣಿಯಂತೆ ಕಾಯಕ ನಮ್ಮ ಬದುಕಿನ ಉಸಿರಾಗಬೇಕು.

ಕಾಯಕದಿಂದಲೇ ಜೀವನ ಮುಕ್ತಿ ಆಗಿದ್ದು, ಪ್ರತಿಯೊಬ್ಬರು ತಾವು ಮಾಡುವ ಕಾಯಕವನ್ನು ಪ್ರೀತಿಸಿ, ಗೌರವಿಸಿದಾಗ ಮಾತ್ರ ನಾವು ಜೀವನದಲ್ಲಿ ಪ್ರಗತಿ ಸಾಧಿಸಲು ಸಾಧ್ಯ ಎಂದ ಕುಮಾರ್, ಇಂತಹ ಸತ್ಸಂಗ ಕಾರ್ಯಕ್ರಮಗಳು ಮನಸ್ಸಿಗೆ ಹಿತ ನೀಡುವುದರ ಜೊತೆಗೆ ಉತ್ತಮ ಬದುಕಿಗೆ ಮಾರ್ಗದರ್ಶನ ನೀಡುತ್ತವೆ ಎಂದರು.

ಪ್ರವಚನಕಾರ ಹೊಳೆಸಿರಿಗೆರೆಯ ಡಿ.ಸಿದ್ದೇಶ್ ಅವರು, ಪ್ರಾಸ್ತಾವಿಕವಾಗಿ ಮಾತನಾಡಿ, ಕಾಯಕ ಮಾಡದ ಜೀವ ಕೈಲಾಸ ಕಾಣದು. ಹುಟ್ಟಿದ ಮೇಲೆ ಕರ್ತವ್ಯಗಳನ್ನು ಮಾಡಬೇಕು. ಆಗ ಮಾತ್ರ ಜೀವನಕ್ಕೆ ಮುಕ್ತಿ ಸಿಗುತ್ತದೆ ಎಂದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ವಿಶ್ವಬಂಧು ಸೊಸೈಟಿ ಅಧ್ಯಕ್ಷ ಡಿ.ಯೋಮಕೇಶ್ವರಪ್ಪ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಜಿ.ಆಂಜನೇಯ, ಗ್ರಾಮದ ಪಿಎಸಿಎಸ್ ಅಧ್ಯಕ್ಷ ಎ.ಜಿ. ನಾಗರಾಜ್, ನಿವೃತ್ತ ಶಿಕ್ಷಕ ಜಿ.ಬಸಪ್ಪ ಮೇಷ್ಟ್ರು, ಮಾಗೋಡ ಈಶ್ವರಪ್ಪ, ಮಾಗೋಡ ಸಿದ್ದಣ್ಣ, ಕುಂದೂರು ಮಂಜಪ್ಪ, ಕುಂಬಳೂರಿನ ಎಂ. ವಾಸುದೇವಮೂರ್ತಿ, ಕೆ.ಕುಬೇರಪ್ಪ, ಗೋಪಾಲಪ್ಪ, ಸದಾಶಿವ, ಯಲವಟ್ಟಿಯ ಕೆ.ಮಂಜಪ್ಪ, ಎ.ಸುರೇಶ್, ಹುಲ್ಲುಮನಿ ರಾಜಣ್ಣ, ಹೊಸಮನಿ ಮಲ್ಲಪ್ಪ, ಜಿಗಳಿಯ ನಾಗಸನಹಳ್ಳಿ ಬಿ.ಸೋಮಶೇಖರಚಾರಿ, ಕೆ.ಎಸ್.ಮಾಲತೇಶ್, ಎ.ಕೆ.ಜಯ್ಯಪ್ಪ, ಪತ್ರಕರ್ತ ಪ್ರಕಾಶ್, ಸದಾನಂದ, ನಾಗೇಂದ್ರಪ್ಪ, ಹನಗವಾಡಿ ರುದ್ರಮನಿ, ಕೆ.ಪಾಲಾಕ್ಷಪ್ಪ, ಸಾರಥಿ ರಮೇಶ್, ಎ.ಬಿ. ಮಂಜುನಾಥ್, ನಿವೃತ್ತ ಯೋಧ ಶಿವಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಜಿಗಳಿಯ ಬೆಳ್ಳೂಡಿ ರಂಗಪ್ಪ ಅವರು, ಈ ದಿನದ ದಾಸೋಹಿಗಳಾಗಿದ್ದರು. ಸಾಫ್ಟ್‌ವೇರ್ ಇಂಜಿನಿಯರ್ ಸಿರಿಗೆರೆಯ ವೆಂಕಟೇಶ್‌ಗೌಡ, ವಿದ್ಯಾರ್ಥಿ ಎಂ.ಎಸ್.ಶಿವಕುಮಾರ್ ಭಕ್ತಿ ಗೀತೆ ಹಾಡಿದರು. ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿ, ವಂದಿಸಿದರು.

## ಎಐಡಿಎಸ್‌ಓ ವಿದ್ಯಾರ್ಥಿ ಪ್ರಣಾಳಿಕೆ ಬಿಡುಗಡೆ




ದಾವಣಗೆರೆ, ಏ.24- ಲೋಕಸಭಾ ಚುನಾವಣೆ ಹಿನ್ನೆಲೆ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಚರ್ಚಿಸಲು ಎಸ್‌ಯುಸಿಐ ಕಮ್ಯೂನಿಷ್ಟ್ ಪಕ್ಷದ ಅಭ್ಯರ್ಥಿ ಅಣಬೇರು ತಿಪ್ಪೇಶ್ ಅವರಿಗೆ ವಿದ್ಯಾರ್ಥಿ ಪ್ರಣಾಳಿಕೆ ನೀಡಿತು.

ಪ್ರಣಾಳಿಕೆ ನೀಡಿ ಮಾತನಾಡಿದ ಸಂಘಟನೆಯ ಜಿಲ್ಲಾಧ್ಯಕ್ಷರಾದ ಪೂಜಾ ನಂದಿಹಳ್ಳಿ ಅವರು, ಅಪ್ರಜಾತಾಂತ್ರಿಕವಾಗಿರುವ ಎನ್‌ಇಪಿ ಶಿಕ್ಷಣ ನೀತಿ ಹಿಂಪಡೆಯಬೇಕು, ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸ ಬೇಕೆಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ಚರ್ಚಿಸಲು ಮನವಿ ಮಾಡಿದರು.

ಎಲ್ಲ ಸರ್ಕಾರಗಳು ದೇಶದ ನೈಜ ಸಮಸ್ಯೆಗಳನ್ನು ಮರೆಮಾಚುತ್ತಾ ಜಾತಿ-ಧರ್ಮದ ವಿಷಯವನ್ನು ಸಮಾಜದ ಮುನ್ನೆಲೆಗೆ ತರುತ್ತಿವೆ. ಆದ್ದರಿಂದ ವಿದ್ಯಾರ್ಥಿಗಳು ಪ್ರಜ್ಞಾವಂತಿಕೆಯಿಂದ ತಮ್ಮ ಸಮಸ್ಯೆಗಳು ಸಂಸತ್ತಿನಲ್ಲಿ ಚರ್ಚೆಯಾಗುವಂತೆ ಧ್ವನಿ ಎತ್ತಬೇಕಿದೆ ಎಂದರು.

ಕ್ರಾಂತಿಕಾರಿಗಳಾದ ಭಗತ್ ಸಿಂಗ್ ಹಾಗೂ ನೇತಾಜಿಯವರ ಉತ್ತರಾಧಿಕಾರಿಗಳಾಗಿ ಅನ್ಯಾಯ ಮತ್ತು ಅಸತ್ಯದ ವಿರುದ್ಧ ಹೋರಾಡುವ ಉದಾತ್ತ ರಾಜಕೀಯ ಬೇಕಿದ್ದು, ಈ ನಿಟ್ಟಿನಲ್ಲಿ ಪ್ರಜಾತಾಂತ್ರಿಕ, ವೈಜ್ಞಾನಿಕ, ಧರ್ಮನಿರಪೇಕ್ಷ ಶಿಕ್ಷಣ ಖಾತ್ರಿಪಡಿಸುವಂತೆ ವಿದ್ಯಾರ್ಥಿಗಳು ಒಕ್ಕೊರಲಿನಿಂದ ಸರ್ಕಾರಕ್ಕೆ ಒತ್ತಾಯಿಸಬೇಕು ಎಂದರು.

## ವಿಶ್ವಕರ್ಮ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

**ರಾಣೇಬೆನ್ನೂರು**

ರಾಣೇಬೆನ್ನೂರು, ಏ. 24 - ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 85ಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ವಿಶ್ವಕರ್ಮ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಇದೇ ದಿನಾಂಕ 30 ರೊಳಗಾಗಿ ಹೆಸರು ನೋಂದಾಯಿಸಬಹುದು.

ವಿವರಕ್ಕೆ ಗುರೂಜೀ ಶ್ರೀ ಮೌನೇಶ್ವರ ಆಚಾರ್ಯ, ಶ್ರೀ ವಿಶ್ವವಿಭು ರೇಕಿ ಧ್ಯಾನಪೀಠ. ಸೇವಾಲಾಲ್ ಪ್ರಾಥಮಿಕ ಶಾಲೆ ಹತ್ತಿರ ಉಮಾಶಂಕರ ನಗರ ರಾಣೇಬೆನ್ನೂರು (9731066729) ಇಲ್ಲಿ ಸಂಪರ್ಕಿಸಬಹುದು.

**ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಸಿ.ಜೆ.ಎಂ., ದಾವಣಗೆರೆ**

**ಜಿ. ಅಂಡ್ ಡಬ್ಲ್ಯೂ.ಸಿ.ಸಂಖ್ಯೆ.11/2024**

**ಅರ್ಜಿದಾರರು** : 1. **ಶ್ರೀಮತಿ ಕವಿತ ಕೋಂ ಲೇಟ್ ಜಿ. ನಾಗರಾಜ** ವಯಸ್ಸು ಸುಮಾರು 34 ವರ್ಷ, 2. ಕು॥ ಎಂ.ಎನ್. ಅನು ಬಿನ್ ಲೇಟ್ ಜಿ. ನಾಗರಾಜ ವಯಸ್ಸು ಸುಮಾರು 17 ವರ್ಷ, 2ನೇ ಅರ್ಜಿದಾರರು ಮೈನರ್ ಇದ್ದು, ಅವರ ಕಾನೂನುಬದ್ಧ ವಾರಸುದಾರರಾದ ಅವರ ತಾಯಿ ಶ್ರೀಮತಿ ಕವಿತ ಕೋಂ ಲೇಟ್ ಜಿ. ನಾಗರಾಜ ಇವರು ಇರುತ್ತಾರೆ. (1ನೇ ಅರ್ಜಿದಾರರು)

ಮೇಲ್ಕಂಡ ಅರ್ಜಿದಾರರ ಖಾಯಂ ವಾಸ: ಕೋಡಿಹಳ್ಳಿ ರಸ್ತೆ, ಕಕ್ಕರಗೊಳ್ಳ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. **ವಿರುದ್ಧ**

**ಎದುರುದಾರರು** : ಯಾರೂ ಇಲ್ಲ.

**ಸಾರ್ವಜನಿಕ ಪ್ರಕಟಣೆ**

ಈ ಮೇಲ್ಕಂಡ ಅರ್ಜಿಯನ್ನು ದಿವಂಗತ ಜಿ. ನಾಗರಾಜ ಇವರ ಮರಣಾನಂತರ 1ನೇ ಅರ್ಜಿದಾರರು ಮತ್ತು ಅಲ್ಪವಯಿ 2ನೇ ಅರ್ಜಿದಾರರ ಜಂಟಿ ಹಕ್ಕುದಾರಿ ಸ್ವಾಧೀನಾನುಭವದಲ್ಲಿರುವ ಷೆಡ್ಯೂಲ್ ಸ್ವತ್ತಿನ ಬಗ್ಗೆ 1ನೇ ಅರ್ಜಿದಾರರು ತನ್ನ ಅಲ್ಪವಯಿ 2ನೇ ಅರ್ಜಿದಾರರ ಮಗಳ ಪರವಾಗಿ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅನುಮತಿ ಕೋರಿ ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ

ಈ ಬಗ್ಗೆ ಯಾರದೇ ಆಗಲೀ, ಯಾವುದೇ ತಂಟೆ, ತಕರಾರು ಇದ್ದಲ್ಲಿ, ಖುದ್ದಾಗಿ ಆಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಿನಾಂಕ: 7/6/2024ರಂದು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಈ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ಯಾರದೇ ತಕರಾರು ಇಲ್ಲವೆಂದು ಪರಿಗಣಿಸಿ, ಅರ್ಹತೆಯ ಆಧಾರದ ಮೇಲೆ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 23.04.2024ರಂದು ನೀಡಲಾಗಿದೆ.

**ಷೆಡ್ಯೂಲ್** : ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕಕ್ಕರಗೊಳ್ಳ ಗ್ರಾಮದ ಸ. ನಂ. 9/10ರಲ್ಲಿ ವಿಸ್ತೀರ್ಣ 02 ಎಕರೆ 38.08 ಗುಂಟೆ ಜಮೀನಿಗೆ **ಚೆಕ್ಕುಬಂದಿ. ಪೂರ್ವಕ್ಕೆ** : ಹಳ್ಳ, **ಪಶ್ಚಿಮಕ್ಕೆ** : ಮಲ್ಲಪ್ಪರ ಉಮ್ಮಣ್ಣನವರ ಜಮೀನು, **ಉತ್ತರಕ್ಕೆ** : ದಾರಿ ಮತ್ತು ಬಸಪ್ಪನವರ ಜಮೀನು, **ದಕ್ಷಿಣಕ್ಕೆ** : ದತ್ತಾತ್ರೇಯ ಇವರ ಜಮೀನು.

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರ್‌ರವರು**
ಪ್ರಧಾನ ಹಿರಿಯ ಸಿವಿಲ್ & ಸಿ.ಜೆ.ಎಂ.
ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

**(ಆರ್.ಟಿ. ವಿನಯ ಕುಮಾರ್)**
ಅರ್ಜಿದಾರರ ಪರ ವಕೀಲರು

ಸ್ಥಳ : ದಾವಣಗೆರೆ,
ದಿನಾಂಕ : 22.04.2024

# ಅಂಬೇಡ್ಕರ್ ಜೀವನ ಸಾಧನೆ ನಮಗೆಲ್ಲಾ ಪ್ರೇರಣೆ

## ಅಂಬೇಡ್ಕರ್ ಜಯಂತ್ಯೋತ್ಸವದಲ್ಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ



ದಾವಣಗೆರೆ, ಏ. 24- ಸಾಮಾಜಿಕ ಸಮಾನತೆಗಾಗಿ ಜೀವನವನ್ನೇ ಮುಡಿಪಿಟ್ಟು, ನಮಗೆಲ್ಲಾ ವಾಕ್ ಸ್ವಾತಂತ್ರ್ಯ, ಸಮಾನವಾಗಿ ಬದುಕುವ ಸ್ವಾತಂತ್ರ್ಯ ನೀಡಲು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ-ಸಾಧನೆ ನಮಗೆಲ್ಲಾ ಪ್ರೇರಣೆ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ನಗರದ ಅಂಬೇಡ್ಕರ್ ವೃತ್ತ ಹಾಗೂ ಗಾಂಧಿ ನಗರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಅಂಬೇಡ್ಕರ್ ನೀಡಿದ ಸಂವಿಧಾನದ ಫಲವಾಗಿ ಇಂದು ನಾವು-ನೀವು ಗೌರವದಿಂದ ಬದುಕು ನಡೆಸುತ್ತಿದ್ದೇವೆ. ಎಲ್ಲರನ್ನೂ ಸಮಾನವಾಗಿ ನೋಡಬೇಕು, ಎಲ್ಲರೂ ಸಮಾನರು ಅನ್ನೋ ದೃಷ್ಟಿ ಇಟ್ಟುಕೊಂಡು ರಚನೆಯಾದ ನಮ್ಮ ಸಂವಿಧಾನ ಜಗತ್ತಿನ ಅತ್ಯಂತ ಶ್ರೇಷ್ಠ ಸಂವಿಧಾನ ಎಂದರೆ ತಪ್ಪಾಗಲಾರದು. ಅಂತಹ ಸಂವಿಧಾನ ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರು ಯಾವಾಗಲೂ ನಮ್ಮ ಮನಸ್ಸಿನಲ್ಲಿ ನೆಲೆಯೂರಿರುತ್ತಾರೆ ಎಂದರು.

ಅಂಬೇಡ್ಕರ್ ಅಂದರೆ ಅದೊಂದು ದೈತ್ಯ ಶಕ್ತಿ. ಧ್ವನಿ ಇಲ್ಲದವರಿಗೆ ಧ್ವನಿಯಾಗಿ, ಶಕ್ತಿ ಇಲ್ಲದವರಿಗೆ ಆತ್ಮಸ್ಥೈರ್ಯವಾಗಿ ನಾನು ನಿಮ್ಮೊಂದಿಗೆ ಇದ್ದೀನಿ ಎಂದು ಸಂವಿಧಾನದ ಮೂಲಕ ಅಂಬೇಡ್ಕರ್ ಅವರ ಧ್ವನಿ ಅಶರೀರವಾಣಿಯಾಗಿ ಕೇಳಿಸುತ್ತದೆ. ಅಂತಹ ಅಂಬೇಡ್ಕರ್ ಅವರ ಮೌಲ್ಯ, ಜೀವನ ಸಾಧನೆಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಯುವ ಪೀಳಿಗೆಗೆ ಪಸರಿಸುವ ಕಾರ್ಯ ನಡೆಯಬೇಕು. ಅಂಬೇಡ್ಕರ್ ಅವರ ಚಿಂತನ-ಮಂಥನ ಕೇವಲ ಏಪ್ರಿಲ್ 14 ಕ್ಕೆ ಸೀಮಿತವಾಗಿರದೆ, ವರ್ಷ ಪೂರ್ತಿ ಅಂಬೇಡ್ಕರ್ ವಿಚಾರಧಾರೆಗಳನ್ನು ಯುವ ಸಮೂಹಕ್ಕೆ ಪರಿಚಯಿಸುವ ಕೆಲಸ ಆಗಬೇಕು ಎಂದರು.

ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯುಂತಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿದರು.

ಜಗಳೂರು ವಿಧಾನಸಭಾ ಕ್ಷೇತ್ರದ ರಾಮಘಟ್ಟ ಗ್ರಾಮದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಪಾಲ್ಗೊಂಡು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಕೇಕ್ ಕತ್ತರಿಸಿ ಸಿಹಿ ತಿನ್ನಿಸುವ ಮೂಲಕ ವಿಶೇಷವಾಗಿ ಅಂಬೇಡ್ಕರ್ ಜಯಂತಿ ಆಚರಿಸಿದರು.

ಬಿಜೆಪಿ ಯುವ ಮುಖಂಡ ಜಿ.ಎಸ್.ಅನಿತ್ ಕುಮಾರ್, ಜಿಲ್ಲಾಧ್ಯಕ್ಷ ರಾಜಶೇಖರ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ರಾಜು, ನಿಂಗರಾಜು, ರಾಜಪ್ಪ, ಶಿವಾನಂದ, ಶ್ರೀನಿವಾಸ್, ಧನಂಜಯ್ ಕಡ್ಲೇಬಾಳು, ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಎಸ್ಸಿ ಮೋರ್ಚಾ ಪದಾಧಿಕಾರಿಗಳು, ಕಾರ್ಯಕರ್ತರು ಜೊತೆಯಲ್ಲಿದ್ದರು.

# ಸಂಸದರ ದುರ್ವರ್ತನೆಯಿಂದ ಕಾಂಗ್ರೆಸ್ ಸೇರ್ಪಡೆ : ಕಲ್ಲಿಂಗಪ್ಪ

ದಾವಣಗೆರೆ, ಏ. 24- ಸಂಸದ ಜಿ.ಎಂ. ಸಿದ್ದೇಶ್ವರ ಅವರ ದುರ್ವರ್ತನೆಯಿಂದ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿರುವುದಾಗಿ ಕೆ.ಪಿ. ಕಲ್ಲಿಂಗಪ್ಪ ಹೇಳಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮೊಟ್ಟಿಗೆ ಮಟ್ಟಿಕಲ್ ವೀರಭದ್ರಸ್ವಾಮಿ ಸೇರಿದಂತೆ, ಹಲವರು ಕಾಂಗ್ರೆಸ್ ಸೇರಿದ್ದಾರೆ. ಕೆಲವೇ ದಿನಗಳಲ್ಲಿ ಇನ್ನಷ್ಟು ಮುಖಂಡರು ಬಿಜೆಪಿ ತೊರೆಯಲಿದ್ದಾರೆ ಎಂದರು.

ಮಟ್ಟಿಕಲ್ ವೀರಭದ್ರಸ್ವಾಮಿ, ಆರ್. ಪ್ರತಾಪ್, ಗುಡ್ಡಪ್ಪ, ಶಾಂತಾಬಾಯಿ, ಅಣಜಿ ಬಸವರಾಜ್, ಅಣಜಿ ಪ್ರಶಾಂತ್, ಎಸ್.ಜಿ. ಬಸವರಾಜ್, ಬಸವರಾಜ್ ಸಿರಿಗೆರೆ, ರಾಜೇಶ್ ಹೆಚ್.ಎಂ. ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಜನಜಾಗೃತಿಗಾಗಿ ದಸಂಸ ಆಂದೋಲನ

ದಾವಣಗೆರೆ, ಏ. 24- ಬಿಜೆಪಿಯು ಹಿಂದೂ ರಾಷ್ಟ್ರದ ಹೆಸರಿನಲ್ಲಿ ಮನುವಾದಿ ಧರ್ಮ ಸ್ಥಾಪಿಸಲು ಹೊರಟಿರುವ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿ-ಕರ್ನಾಟಕದ ವತಿಯಿಂದ ಪ್ರತಿ ಗ್ರಾಮಗಳಲ್ಲಿ ಸಂವಿಧಾನ ಜಾಗೃತಿ ಆಂದೋಲನ ಹಮ್ಮಿಕೊಂಡಿರುವುದಾಗಿ ಸಂಘಟನೆಯ ಜಿಲ್ಲಾ ಸಂಚಾಲಕ ಅಜ್ಜಪ್ಪ ಎನ್. ತಿಳಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದ ಸಂವಿಧಾನ ಉಳಿದಿದೆ. ಬಿಜೆಪಿ ಸಂವಿಧಾನ ನಾಶ ಮಾಡಲು ಹೊರಟಿದೆ. ಈ ಕುರಿತು ಜನ ಜಾಗೃತಿ ಅಗತ್ಯವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಿ.ರಾಜಪ್ಪ, ಬಿ.ಅಣ್ಣಪ್ಪ, ಚನ್ನಗಿರಿ ಅಣ್ಣಪ್ಪ, ಆನಂದ್ ಸೋಮಶೇಖರ್, ಮಣಿಕಂಠ ಟಿ., ನಿಂಗರಾಜು ಇತರರಿದ್ದರು.

# ಕಳ್ಳತನ: ಆರೋಪಿ ಬಂಧನ, ಸ್ವತ್ತು ವಶ

ದಾವಣಗೆರೆ, ಏ. 24- ಕೆಟಿಜೆ ನಗರ 15ನೇ ಕ್ರಾಸ್ ಮನೆಯೊಂದರಲ್ಲಿ ಕಳ್ಳತನವಾಗಿದ್ದ ಪ್ರಕರಣ ಪತ್ತೆ ಹಚ್ಚಿರುವ ಪೊಲೀಸರು ಗೋಪಾಲಪುರದ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ ಸೈಯ್ಯದ್ ಫಜಲ್ (29) ಎಂಬಾತನನ್ನು ಬಂಧಿಸಿ, ಆತನಿಂದ 5.51 ಲಕ್ಷ ರೂ. ಬೆಲೆಯ 90.4 ಗ್ರಾಂ ಬಂಗಾರದ ಆಭರಣಗಳು ಹಾಗೂ 4 ಸಾವಿರ ರೂ. ನಗದು ವಶಪಡಿಸಿಕೊಂಡಿದ್ದಾರೆ.

ಮನೆಗೆ ಬೀಗ ಹಾಕಿಕೊಂಡು ಆಸ್ಪತ್ರೆಗೆ ಹೋಗಿದ್ದಾಗ ಬೀಗ ಮುರಿದು ಕಳ್ಳತನವಾದ ಬಗ್ಗೆ ಪ್ರಮೀಳಾ ಎಂಬುವವರು ಕೆಟಿಜೆ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

# ಕಾಂಗ್ರೆಸ್ ಸೇರಿದ ಗುಡ್ಡದ ಬೇವಿನಹಳ್ಳಿ ಜೆಡಿಎಸ್ ಮುಖಂಡರು



ಹರಿಹರ,ಏ.24- ತಾಲ್ಲೂಕಿನ ಗುಡ್ಡದ ಬೇವಿನ ಹಳ್ಳಿಯ ಜೆಡಿಎಸ್ ಪಕ್ಷದ ನಾಯಕ ಸಮಾಜದ ಮುಖಂಡರು ಮತ್ತು ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಎಸ್. ಎಸ್ ಮಲ್ಲಿಕಾರ್ಜುನ್ ಅವರು, ಗುಡ್ಡದ ಬೇವಿನಹಳ್ಳಿ ಗ್ರಾಮಕ್ಕೂ ನಮಗೂ ಅವಿನಾಭಾವ ಸಂಬಂಧವಿದೆ. ಸಾಕಷ್ಟು ಜನ ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತಿರುವಿರಿ, ನಿಮಗೆಲ್ಲ ಆತ್ಮೀಯವಾಗಿ ಸ್ವಾಗತಿಸುವುದಾಗಿ ತಿಳಿಸಿದರು.

ಹಿಂದಿನ ಯಾವುದೇ ವೈಮನಸ್ಸು ಇದ್ದರೂ ಅವುಗಳನ್ನು ಮರೆತು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರ ಕೈ ಬಲಪಡಿಸಬೇಕಿದೆ ಎಂದರು.

ಗುಡ್ಡದ ಬೇವಿನಹಳ್ಳಿಯಲ್ಲಿ ಅನೇಕ ಸಮಸ್ಯೆಗಳಿವೆ. ಅವುಗಳನ್ನು ಚುನಾವಣೆಯ ಬಳಿಕ ಹಂತ ಹಂತವಾಗಿ ಸರಿಪಡಿಸೋಣ. ಆ ಭಾಗದ ಅಭಿವೃದ್ಧಿಗೆ ಮುಂದಾಗೋಣ. ಗುಡ್ಡದ ಬೇವಿನಹಳ್ಳಿ, ನದಿಗೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಹೆಚ್ಚು ಪಕ್ಷ ಸಂಘಟನೆ ಮಾಡಬೇಕು, ಕುಟುಂಬ ಸಮೇತರಾಗಿ ಕಾಂಗ್ರೆಸ್ ಪಕ್ಷಕ್ಕೆ ಮತವನ್ನು ಹಾಕಿಸಬೇಕು ಎಂದರು.

**ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಲು ಸಚಿವ ಎಸ್ಸೆಸ್ಸೆಂ ಮನವಿ**

ರಾಜನಹಳ್ಳಿ ಮಠದ ಮಾಜಿ ವ್ಯವಸ್ಥಾಪಕರು ಮತ್ತು ನಾಯಕ ಸಮಾಜದ ಹಿರಿಯ ಮುಖಂಡ ಹೆಚ್.ಬಿ ಶ್ರೀಕಾಂತ್ ಸಹಯೋಗದಲ್ಲಿ ನಾಯಕ ಸಮಾಜದ ಮುಖಂಡರುಗಳು ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ವಾಗೀಶ ಸ್ವಾಮಿ, ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯ ಬಿ.ಹೆಚ್. ತಿಪ್ಪೇರುದ್ರಾರೆಡ್ಡಿ, ಹೆಚ್. ರುದ್ರಪ್ಪ ದೇವರಬೆಳಕೆರೆ, ಯಂಕಪ್ಪರೆಡ್ಡಿ. ಟಿ. ಬಿಳಸನೂರು, ಎನ್.ರಂಗಪ್ಪ ರೆಡ್ಡಿ, ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ತಿಮ್ಮಾರೆಡ್ಡಿ, ಬಿ. ರಂಗಪ್ಪ ರೆಡ್ಡಿ, ವೈ.ಹೆಚ್ ರೆಡ್ಡಿ, ಗ್ರಾಮ ಪಂಚಾಯ್ತಿ ಸದಸ್ಯ ಮಾಜಿ ಬಿ. ಹಾಲಸ್ವಾಮಿ, ಜಿಗಳಿ ದೇವೇಂದ್ರಪ್ಪ, ಜಿಗಳಿ ಆನಂದಪ್ಪ ಇತರರು ಇದ್ದರು.

# ಕೋಟಕ್ ಮಹಿಂದ್ರ ಬ್ಯಾಂಕ್‌ಗೆ ಗ್ರಾಹಕರ ಸೇರ್ಪಡೆಗೆ ನಿರ್ಬಂಧ

(1ನೇ ಪುಟದಿಂದ) ಬ್ಯಾಂಕಿನ 2022 ಹಾಗೂ 2023ರ ಐ.ಟಿ. ಮಾಹಿತಿಯಲ್ಲಿ ಕೆಲ ಲೋಪಗಳು ಕಂಡು ಬಂದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.



# ಗ್ರಾಮೀಣ ಮಕ್ಕಳಿಗೆ ಶಿಕ್ಷಣ, ಉದ್ಯೋಗ ಸಿಗಬೇಕಾದರೆ ನನ್ನನ್ನು ಗೆಲ್ಲಿಸಿ

## ಹಾಲೇಕಲ್ಲು ಗ್ರಾಮದಲ್ಲಿ ಜಿ.ಬಿ.ವಿನಯ್ ಕುಮಾರ್

ಜಗಳೂರು,ಏ.24- ಗ್ರಾಮೀಣ ಭಾಗದ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗಬೇಕಾದರೆ ನನ್ನನ್ನು ಗೆಲ್ಲಿಸಿ, ನಾನು ಶ್ರಮ ವಹಿಸುತ್ತೇನೆ. ಹೊಸ ವ್ಯವಸ್ಥೆ ಸೃಷ್ಟಿಸಲು ರಾಜಕೀಯದಲ್ಲಿ ಅಧಿಕಾರ ಬೇಕು. ಈ ಬಾರಿ ನನ್ನನ್ನು ಗೆಲ್ಲಿಸಿ, ಜಿಲ್ಲೆಯ ಅಭಿವೃದ್ಧಿಯ ದಿಕ್ಕೇ ಬದಲಾಗುತ್ತದೆ ಎಂದು ಲೋಕಸಭೆ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಹೇಳಿದರು.

ಹಾಲೇಕಲ್ಲು ಗ್ರಾಮಸ್ಥರನ್ನುದ್ದೇಶಿಸಿ ಮಾತನಾಡಿದ ಅವರು, ಗುಲಾಮರಾಗಿ, ಹೇಳಿದ್ದನ್ನು ಕೇಳಿಕೊಂಡು ಬದುಕುವ ಸಂಸ್ಕೃತಿ ಇನ್ನು 50 ವರ್ಷವಲ್ಲ, ನೂರು ವರ್ಷ ಆದರೂ ಬದಲಾಗಲ್ಲ. ಈ ಬಾರಿ ಅವಕಾಶ ಸಿಕ್ಕಿದೆ. ಅದನ್ನು ಬಳಸಿಕೊಳ್ಳೋಣ. ಶಿಕ್ಷಣದ ಸಹಾಯದಿಂದ ಜ್ಞಾನ ಸಂಪಾದನೆ ಮಾಡಿದೆ. ಸೇವೆಗೊಂದು ಅವಕಾಶ ಕೊಡಿ. ಜಗಳೂರಿನಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಕುಡಿಯುವ ನೀರಿನ ಸಮಸ್ಯೆ, ನೀರಾವರಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಕುಡಿಯುವ ನೀರು, ಶಿಕ್ಷಣ, ಉದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಕೈಗಾರಿಕೆಗಳ ಸ್ಥಾಪನೆ, ಮೆಕ್ಕೆಜೋಳ ಹೆಚ್ಚಾಗಿ ಬೆಳೆಯಲಾಗುತ್ತದೆ. ಕೋಲ್ಡ್ ಸ್ಟೋರೇಜ್, ಉದ್ಯೋಗ ಸೃಷ್ಟಿಸುವಂಥ ಕೈಗಾರಿಕೆಗಳನ್ನು ತರುತ್ತೇನೆ. ಹಳ್ಳಿ ಹಳ್ಳಿಗಳಲ್ಲೂ ಜನರು ಪ್ರೀತಿ ತೋರುತ್ತಿದ್ದಾರೆ. ನಿಮ್ಮ ಕೆಲಸ ಮಾಡಲು ನಾನು ಬಂದಿರುವುದು. ಯಾವುದೇ ಸ್ವಾರ್ಥ ಸಾಧನೆಗಲ್ಲ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಪ್ರತಿಯೊಬ್ಬರೂ ಬದಲಾವಣೆ ಬಯಸಿದ್ದಾರೆ. ಈ ಹಿಂದೆ ಯಾವ ಚುನಾವಣೆಯಲ್ಲೂ ಬದಲಾವಣೆಯ ಅವಕಾಶ ಇರಲಿಲ್ಲ. ಈ ಬಾರಿ ಬಂದಿದೆ. ಪ್ರತಿಯೊಬ್ಬರ ಮನೆಯಲ್ಲೂ ಸಿಲಿಂಡರ್ ಇದೆ. ಈ ಚಿಹ್ನೆಗೆ ಮತ ನೀಡಿ ಗೆಲ್ಲಿಸಿ ಎಂದು ಮನವಿ ಮಾಡಿದರು.

# ಐದನೇ ಬಾರಿ ದಾವಣಗೆರೆ ನಗರಕ್ಕೆ ಮೋದಿ

(1ನೇ ಪುಟದಿಂದ) ಸಮಾವೇಶದಲ್ಲಿ ವೃತ್ತಿಪರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ವಿಶೇಷ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು. ಸುಮಾರು 1.25 ಲಕ್ಷ ಜನ ಕುಳಿತುಕೊಳ್ಳಲು ಇಲ್ಲಿ ವ್ಯವಸ್ಥೆ ಮಾಡಲಾಗುವುದು. 2 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಯಶವಂತ ರಾವ್ ಜಾಧವ್, ಡಾ. ಎ.ಹೆಚ್. ಶಿವಯೋಗಿಸ್ವಾಮಿ, ವೈ. ಮಲ್ಲೇಶ್, ಜಿ.ಎಸ್. ಅನಿತ್, ಎಸ್.ಟಿ. ವೀರೇಶ್, ಪ್ರಸನ್ನ ಕುಮಾರ್, ಶಿವನಳ್ಳಿ ರಮೇಶ್, ಶಿವಪ್ರಕಾಶ್, ಕೆ.ಎಂ. ವೀರೇಶ್, ಶಿವನಗೌಡ ಪಾಟೀಲ್, ಭಾಗ್ಯ ಪಿಸಾಳೆ, ಚೇತನ ಶಿವಕುಮಾರ್, ಸವಿತಾ ರವಿಕುಮಾರ್, ಕೊಳೇನಹಳ್ಳಿ ಸತೀಶ್, ಜಿ.ಎಸ್. ಶ್ಯಾಮ್, ಸಿದ್ದೇಶ್ ಮತ್ತಿತರರು ಉಪಸ್ಥಿತರಿದ್ದರು.

## ಎಸ್ಸೆಸ್ಸೆಂಗೇ ಕೊಡಿ ಚೊಂಬು

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಚೊಂಬು ಕೊಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿರುವ ಸಂಸದ ಜಿ.ಎಂ. ಸಿದ್ದೇಶ್ವರ, ಚೊಂಬು ಅವರಿಗೇ ಕೊಡಿ ಎಂದಿದ್ದಾರೆ.

ಸ್ಮಾರ್ಟ್ ಸಿಟಿ ಯೋಜನೆ, ಪಾಸ್‌ಪೋರ್ಟ್ ಕಚೇರಿ, ಇಎಸ್ಐ ಆಸ್ಪತ್ರೆಗೆ 25 ಕೋಟಿ ರೂ., ದಿವ್ಯಾಂಗರಿಗೆ ಆಸ್ಪತ್ರೆ, ರೈಲ್ವೆ ನಿಲ್ದಾಣ ನಿರ್ಮಾಣ, ರೈಲ್ವೆ ಡಬ್ಲಿಂಗ್ - ವಿದ್ಯುದೀಕರಣ, ಆರು ಪಥದ ಹೆದ್ದಾರಿ ಎಲ್ಲವನ್ನೂ ಅವರೇ ಮಾಡಿದ್ದಾರಾ? ಎಂದೂ ಸಿದ್ದೇಶ್ವರ ಪ್ರಶ್ನಿಸಿದರು. ಮೊದಲು ಶಸ್ತ್ರಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಶಸ್ತ್ರಗಳನ್ನು ರಫ್ತು ಮಾಡಲಾಗುತ್ತಿದೆ. ದೇಶ ಆರ್ಥಿಕತೆಯಲ್ಲಿ ಮೂರನೇ ಸ್ಥಾನಕ್ಕೆ ಬಂದಿದ್ದು, 2047ಕ್ಕೆ ಮೊದಲ ಸ್ಥಾನಕ್ಕೆ ಬರುವ ಗುರಿ ಇದೆ ಎಂದೂ ಅವರು ಹೇಳಿದರು.





# ಚಿರಸ್ತಹಳ್ಳಿಯಲ್ಲಿ ರಥೋತ್ಸವ

ಹರಪನಹಳ್ಳಿ, ಏ. 24 - ತಾಲ್ಲೂಕಿನ ಚಿರಸ್ತಹಳ್ಳಿ ಗ್ರಾಮದಲ್ಲಿ ಅಪಾರ ಭಕ್ತರೊಂದಿಗೆ ಶ್ರೀ ಆಂಜ ನೇಯ ಸ್ವಾಮಿ ಹಾಗೂ ಶ್ರೀ ಗುರು ಕಳಂಕ ಮಲ್ಲೇಶ್ವರ ಸ್ವಾಮಿಯ ರಥೋತ್ಸವವು ಸಡಗರದಿಂದ ನಿನ್ನೆ ಜರುಗಿತು.

# ಮತಯಂತ್ರ ಬಿಡಿ ಭಾಗಗಳ ಪೂರೈಕೆದಾರರ ವಿವರಕ್ಕೆ ನಕಾರ

(1ನೇ ಪುಟದಿಂದ) ವೆಂಕಟೇಶ್ ನಾಯಕ್ ಅವರು ವಿವರ ಕೇಳಿ ಎರಡೂ ಕಂಪನಿಗಳಿಗೆ ಒಂದೇ ರೀತಿಯ ಅರ್ಜಿ ದಾಖಲಿಸಿದ್ದರು. ಆದರೆ, ವಾಣಿಜ್ಯ ಗೌಪ್ಯತೆಯ ಈ ವಿಷಯವು ಮಾಹಿತಿ ಹಕ್ಕು ಕಾಯ್ದೆಯಡಿ ಬರುವುದಿಲ್ಲ ಎಂದು ಉಭಯ ಕಂಪನಿಗಳು ಹೇಳಿವೆ.

# ರೈತ ವಿರೋಧಿ ಬಿಜೆಪಿ - ಮಿತ್ರ ಪಕ್ಷಗಳನ್ನು ಸೋಲಿಸಲು ಕರೆ

ದಾವಣಗೆರೆ, ಏ. 24-ರೈತ ವಿರೋಧಿ ಬಿಜೆಪಿ ಹಾಗೂ ಮಿತ್ರ ಪಕ್ಷಗಳನ್ನು ಸೋಲಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜಿ.ಎಂ. ವೀರಸಂಗಯ್ಯ ಕರೆ ನೀಡಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಡಿಯಾ ಒಕ್ಕೂಟವನ್ನು ಬೆಂಬಲಿಸುವಂತೆ ಹೇಳಿದರು.

ಕಳೆದ ಹತ್ತು ವರ್ಷ ಆಡಳಿತ ನಡೆಸಿದ ಬಿಜೆಪಿ ರೈತರಿಗೆ ಯಾವ ಅನುಕೂಲವನ್ನೂ ಮಾಡಿಲ್ಲ. ರೈತ ವಿರೋಧಿ ಕಾಯ್ದೆಗಳನ್ನು ಜಾರಿಗೆ ತಂದಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರುಗಳಾದ ಅರುಣ್ ಕುಮಾರ್ ಕುರುಡಿ, ಬುಳ್ಳಾಪುರದ ಹನುಮಂತಪ್ಪ, ಕರಡಿ ದುರ್ಗದ ಚೌಡಪ್ಪ, ಕೊಗ್ಗನೂರು ಹನುಮಂತಪ್ಪ, ಐಗೂರು ಶಿವಮೂರ್ತಪ್ಪ, ರೇವಣ್ಣ ಕರಿಲಕ್ಕೇನಹಳ್ಳಿ ಹಾಗೂ ಇತರರಿದ್ದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ಡಾ. ನಿರಂಜನ್, (ರೇಡಿಯಾಲಾಜಿಸ್ಟ್)
ಮತ್ತು ಕುಟುಂಬವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ಸೈಟುಗಳು ಮಾರಾಟಕ್ಕಿವೆ
1) ಹಳೆ ಬನಶಂಕರಿ ಲೇಔಟ್‌ನಲ್ಲಿ 30x40 East
2) ಡಾಲರ್ಸ್ ಕಾಲೋನಿಯಲ್ಲಿ 40x40 South
3) ಅಥಣಿ ಕಾಲೇಜ್ ಹತ್ತಿರ 30x42 North
4) S.S. 'B' Blockನಲ್ಲಿ 20x40 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆಗಳು ಮಾರಾಟಕ್ಕಿವೆ
1) ವಿದ್ಯಾನಗರದಲ್ಲಿ 30x60 North ಮೂರು ಫ್ಲೋರ್ ಮನೆ
2) ಡಾಲರ್ಸ್ ಕಾಲೋನಿಯಲ್ಲಿ 30x50 West ಎರಡು ಫ್ಲೋರ್ ಮನೆ
3) ಆಂಜನೇಯ ಬಡಾವಣೆಯಲ್ಲಿ 30x50 North ಮನೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಡ್ರೈವರ್, ಲೇಬರ್ ಬೇಕಾಗಿದ್ದಾರೆ
ಸಂಪರ್ಕಿಸಿ :
ಎಸ್.ವಿ. ಮಾರ್ಕೆಟಿಂಗ್
63620 23451, 97434 37003

ಉಚಿತ ದಂತ ತಪಾಸಣಾ ಶಿಬಿರ
ನವಜಾತ ಶಿಶುವಿನಿಂದ 15 ವರ್ಷದ ಮಕ್ಕಳಿಗೆ
ಏಪ್ರಿಲ್ 01 ರಿಂದ ಮೇ 31ರವರೆಗೆ
ಅರಿವು ಡೆಂಟಲ್ ಕ್ಲಿನಿಕ್
ಪಿ.ಜೆ. ಬಡಾವಣೆ, ದಾವಣಗೆರೆ.
76762 98958, 70196 88355

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಮನೆ ಮಾರಾಟಕ್ಕಿದೆ
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸಿನಲ್ಲಿರುವ #2001ರಲ್ಲಿ 30x40 ಅಳತೆಯಲ್ಲಿರುವ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಶ್ರೀ ಜಿ.ಹೆಚ್. ಮಂಜುನಾಥ್
88849 62111

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಸೈಟುಗಳು ಮಾರಾಟಕ್ಕಿವೆ
ಹರಿಹರ KHB ಕಾಲೋನಿ ಪಕ್ಕದ HRM ಬಡಾವಣೆಯಲ್ಲಿ 30x40 ಅಳತೆಯ ಪೂರ್ವ-ಪಶ್ಚಿಮ ದಿಕ್ಕಿನ ಅಳತೆಯ 4 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

ಮನೆ ಲೀಸ್‌ಗಿದೆ
ಡಬಲ್ ಬೆಡ್ ರೂಂ ಸುಸಜ್ಜಿತ 2ನೇ ಮಹಡಿ ಮನೆ ಶ್ರೀನಿವಾಸ ನಗರ, 4ನೇ ಕ್ರಾಸ್, ಹದಡಿ ರಸ್ತೆ, ದಾವಣಗೆರೆ ಇಲ್ಲಿ ಲೀಸ್‌ಗಿದೆ. ಸಂಪರ್ಕಿಸಿ :
99723 42941

WANTED
Retail experience store Manager Male / Female Branded Store Firstcry. Com, CG Hospital Road, Davanagere - 577002.
Contact :
83108 00027

OFFICE SPACE FOR RENT
1, 2 & Basement Floor, (1000Sqft + Lift) ATM / Mobiles Shop Space, PB Road, Opp, RH Office Dvg.
99646 99096

Finance Advisor
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
78923 29921, 96326 11005

TEACHERS WANTED
B.Sc/M.Sc, B.Ed, CBZ (Urdu) : 1
BA / MA, B.Ed, Kannada : 1
B.Sc/M.Sc, B.Ed, PCM (Kannada): 2
BA / MA, B.Ed, English Major : 3
B.Sc/M.Sc, B.Ed, PCM (English) : 1
B.Sc / M.Sc, B.Ed, CBZ (English) : 1
BA, BP,ED : (P.E) : 1
Anjum Composite High School
Kannada, Urdu & English Medium
Apply or Attend Immediately to above Address
93793 45070, 95381 21919

WANTED
Lady Teachers
Nursery Section - Any Degree
Fluency English is Must.
91645 05229, 77950 66883
SRP Convent, 87478 22749
Anjaneya Badavane, 17th Cross, Davanagere-4

ಬೇಕಾಗಿದ್ದಾರೆ
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052
ಸಮಯ : 1.00 PM to 5.00 PM

WANTED
We are Hirnig telecallers
Good Communication Skill.
Required : (Only for Girls, Womens)
Salary : 6000, 7000 (Under Graduates)
Salary : 8000, 9000, 10,000 (Post Graduates)
Contact : 95350 51589, 78670 75786
Office Location : Hasbahavi Circle, K.R Market, Davangere.

ಶಿಕ್ಷಕಿಯರು ಬೇಕಾಗಿದ್ದಾರೆ
ಜ್ಞಾನದೀಪ ಪಬ್ಲಿಕ್ ಸ್ಕೂಲ್, 60 ಅಡಿ ರಿಂಗ್ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ - 577004.
1) B.A. B.Ed, History / Kannada - 2, 2) B.A. B.Ed, History / English - 2, 3) Hindi B.Ed - 1, 4) B.Sc / B.Sc B. Ed - 1 (PCM) 5) PUC / B.A D.Ed - 2, 6) PUC / R.B.S.T / NTC - 2
ಸಹಿ/- ಕಾರ್ಯದರ್ಶಿಗಳು
94496 79346, 89710 18943

ಕೆಲಸಕ್ಕೆ ಬೇಕಾಗಿದ್ದಾರೆ
ದಾವಣಗೆರೆ
* ಕಲೆಕ್ಷನ್ ಬಾಯ್ (Any Degree)
* ಅಕೌಂಟೆಂಟ್ (B.Com, M.BA)
* ಆಫೀಸ್ ಬಾಯ್
ವಯೋಮಿತಿ 25 ರಿಂದ 40 ವರ್ಷ, ESI, PF ಸೌಲಭ್ಯವಿದೆ.
80503 22279

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಅಧಿಕೃತ ಚೀಟಿ ಸಂಸ್ಥೆ
ರೂ. 5 ಲಕ್ಷ ಚೀಟಿ ಪ್ರಾರಂಭ.
50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
ಸ್ಕಂದ ಚಿಟ್ ಫಂಡ್ಸ್ (ರಿ)
78997 75159

ಬೇಕಾಗಿದ್ದಾರೆ
ಕಿರಾಣಿ ಅಂಗಡಿ ಹಾಗೂ ಹೋಲ್ ಸೇಲ್ ಅಂಗಡಿಗೆ ಅಕೌಂಟ್ಸ್ ವಿಭಾಗದಲ್ಲಿ ಕೆಲಸ ಮಾಡಲು ಟ್ಯಾಲಿ ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ. ಸಂಬಳ 7000 ರಿಂದ 8000. ಈ ಕೆಳಗಿನ ನಂಬರ್‌ಗೆ ರೆಸ್ಯೂಮ್ ಕಳುಹಿಸಿ
94481 09762

FOR SALE
PLAY SCHOOL ITEMS
Desks, White boards
Teaching Materials
Full School Setup
KTG Nagar DVG
90663 45346

WANTED
Lady Teachers
1. B.Sc, B.Ed - Maths - 2
2. B.Sc / B.Com (Primary) - 4
3. Note - Fluency English is must.
Mount Everest Vidyalaya,
Jayanagara `C' Block, Nittuvalli, Dvg-4
97439 24203, 91136 10789

ಶ್ರೀ ದುಗ್ಗಮ್ಮದೇವಿ ಪ್ರಸನ್ನ
ಟಗರು ಮಾರಾಟಕ್ಕಿದೆ
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಅಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

ಮನೆ ಮಾರಾಟಕ್ಕಿದೆ
45×30, 26 ಚದರದ ಅಳತೆಯ ಡುಪ್ಲೆಕ್ಸ್ ಮನೆ "ಶ್ರೀ ಹರಿಹರೇಶ್ವರ ಕೃಪ"
3ನೇ ಮುಖ್ಯ ರಸ್ತೆ, 2ನೇ ಕ್ರಾಸ್ ಶಿವ ಪಾರ್ವತಿ ಲೇಔಟ್, ನಾಗನೂರು ರಸ್ತೆ, ಶಾಮನೂರು, ದಾವಣಗೆರೆ.
81970 84238

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

ಬೇಕಾಗಿದ್ದಾರೆ
ACE TRACTOR SHOWROOM ಗಾಗಿ
ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

EMPLOYEES NEEDED
Shankar's International
Caligraphy Employes
Need Boys & Girls
Any Degree or PUC
Salary : 15,000 to 20,000
Ph : 77609 12342

ಮನೆ ಬಾಡಿಗೆಗೆ ಇದೆ
RMC ಮೇನ್ ರೋಡ್, ಬಂಬೂ ಬಜಾರ್ ಮೇನ್ ರೋಡ್‌ನಲ್ಲಿ ಒಂದನೇ ಮಹಡಿ, 2 BHK ಮನೆ, ಸೋಲಾರ್, ಬೋರ್ ವೆಲ್ ಮತ್ತು ಮಹಾನಗರ ಪಾಲಿಕೆ ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ವಿನಾಯಕ ವೇಬ್ರಿಡ್ಜ್ ಎದುರಿಗೆ
83105 24100

ಮನೆ ಲಿಸ್‌ಗೆ ಇದೆ
ಶಿವಕುಮಾರ ಸ್ವಾಮಿ ಬಡಾವಣೆ 2ಹಂತ, ನಲ್ಲಿ ನೀರು, ಬೋರ್ ನೀರು, ವಾಸ್ತು ಪ್ರಕಾರ ಇರುವ, ಗ್ರೌಂಡ್ ಫ್ಲೋರ್ 2BHK ಮನೆ ಲೀಸ್‌ಗೆ ಇದೆ
94481 78626

# ನಗರದಲ್ಲಿ ರಂಗೋಲಿ ಚಿತ್ತಾರ, ಮತದಾರರ ಜಾಗೃತಿಗೆ ಘೋಷವಾಕ್ಯಗಳ ಅನಾವರಣ



ದಾವಣಗೆರೆ, ಏ. 24 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಇವರುಗಳ ಸಹಾಯದೊಂದಿಗೆ ಸೋಮವಾರ ನಗರದ ಗುರುಭವನದ ರಸ್ತೆಯಲ್ಲಿ ರಂಗೋಲಿ ಬಿಡಿಸುವ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ ಮಾತನಾಡಿ ಜಿಲ್ಲೆಯಾದ್ಯಂತ ಗ್ರಾಮೀಣ ಭಾಗದ ಹಳ್ಳಿಗಳಿಂದ ಬಂದಿರುವ ಅಂಗನವಾಡಿ ಸಹಾಯಕರು ಮತ್ತು ಕಾರ್ಯಕರ್ತರು ಬಗೆ ಬಗೆಯ ರಂಗೋಲಿಯ ಚಿತ್ರಗಳನ್ನು ಬಿಡಿಸುವ ಮೂಲಕ ಮತದಾನ ಜಾಗೃತಿ ಮೂಡಿಸಿರುವುದು ಹೆಮ್ಮೆಯ ವಿಷಯವಾಗಿದೆ. ಮತದಾರರೂ ಸಹ ಹೆಮ್ಮೆಯಿಂದ ತಮ್ಮ ಮತ ಚಲಾಯಿಸುವಂತಾಗಬೇಕೆಂದರು.

ರಂಗೋಲಿ ಮೂಲಕ ನಾಲ್ಕು ತಲೆಮಾರಿನ ಒಂದೇ ಕುಟುಂಬದ ಮತದಾರರು, ಮತದಾನ ಮೂಲಭೂತ ಕರ್ತವ್ಯ, ನಮ್ಮ ದೇಶ ಸೇವಕರಿಗೆ ನಾವು ನೀಡುವ ಅಮೂಲ್ಯವಾದ ದಾನವೇ ಮತದಾನ, ಮತದಾನ ಮಾಡಿದರೇ ಮಾತ್ರ, ಆ ಹಕ್ಕಿಗೆ ಅರ್ಥ ಸಿಗುತ್ತದೆ. ಮೇ 7 ರಂದು ತಪ್ಪದೇ ಮತ ಚಲಾಯಿಸಿ ಎಂಬಿತ್ಯಾದಿ ಘೋಷವಾಕ್ಯಗಳೊಂದಿಗೆ ರಂಗೋಲಿ ಬಿಡಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಮಕ್ಕಳ ಅಭಿವೃದ್ಧಿ ಅಧಿಕಾರಿ ಅಶೋಕ್ ಕಾಂಬಳೆ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಿಯದರ್ಶಿನಿ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಿ. ನೇತ್ರಾವತಿ, ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರು ಹಾಗೂ ಇನ್ನಿತರರಿದ್ದರು.

# ಆಲೋಚನೆ ಬದಲಾದಾಗ ಸಮಾಜ ಬದಲಾವಣೆ



ದಾವಣಗೆರೆ, ಏ.24- ನಮ್ಮ ಆಲೋಚನಾ ಶಕ್ತಿ ಬದಲಾಯಿಸಿಕೊಂಡಾಗ ಮಾತ್ರ ಸಮಾಜದ ಬದಲಾವಣೆ ಸಾಧ್ಯ ಎಂದು ರಾಜ್ಯ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಚ್. ಬಿಲ್ಲಪ್ಪ ಹೇಳಿದರು.

ವಕೀಲರ ಸಂಘದಿಂದ ನಗರದ ಜಿಲ್ಲಾ ಕೋರ್ಟ್ ಭವನದಲ್ಲಿ ಬುಧವಾರ ನಡೆದ 133ನೇ ಅಂಬೇಡ್ಕರ್ ಜಯಂತಿ ಅಂಗವಾಗಿ 'ಅಂಬೇಡ್ಕರ್ ಮತ್ತು ಸಂವಿಧಾನ' ಕುರಿತು 8ನೇ ಉಪನ್ಯಾಸ ಮಾಲಿಕೆ ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರು ಸಮಾಜದ ಶಾಂತಿ, ಸಮಾನತೆ ಮತ್ತು ಮಾನವಿಯತೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಸ್ವಾಸ್ಥ್ಯ ಸಮಾಜಕ್ಕಾಗಿ ಶ್ರಮಿಸಿದರು ಎಂದು ಹೇಳಿದರು.

ಅಂದು ಮಹರ್ ಜಾತಿಯಲ್ಲಿ ಅಂಬೇಡ್ಕರ್ ಜನಿಸದೇ ಇದ್ದಿದ್ದರೆ, ನಮ್ಮ ದೇಶಕ್ಕೆ ಶ್ರೇಷ್ಠ ಸಂವಿಧಾನ ಸಿಗುತ್ತಿರಲಿಲ್ಲ ಎಂದ ಅವರು, ಇಂತಹ ಶ್ರೇಷ್ಠ ಮಹಾನ್ ನಾಯಕರ ಚಿಂತನೆಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಸಮಾಜಕ್ಕೆ ಒಳಿತು ಮಾಡುವ ಹಾಗೂ ಪರಿಸರ ಸೌಖ್ಯದ ಬಗ್ಗೆ ಚಿಂತಿಸುವವನು ಮಹಾನ್ ನಾಯಕನಾಗಲು ಸಾಧ್ಯ. ಆದುದರಿಂದ ಅಹಂಕಾರ ಗುಣ ತ್ಯಜಿಸಿ, ಓಂಕಾರಿಗಳಾಗುವಂತೆ ಆಶಿಸಿದರು.

**ಜೀವನದಲ್ಲಿ ಒದಗಿ ಬಂದ ಅನುಕೂಲ ಹಾಗೂ ಅವಕಾಶವನ್ನು ಸರಿಯಾಗಿ ಬಳಸಿಕೊಂಡರೆ ಜೀವನದಲ್ಲಿ ಯಶಸ್ಸು ಸಾಧಿಸಬಹುದು.**
**- ಎಚ್. ಬಿಲ್ಲಪ್ಪ, ವಿಶ್ರಾಂತ ನ್ಯಾಯಮೂರ್ತಿ**

ನಿರಂತರ ಅಧ್ಯಯನದಿಂದ ಅಪಾರ ವಿದ್ವತ್ತುಗಳಿಸಿದ್ದ ಅಂಬೇಡ್ಕರ್ ಸಾಕಷ್ಟು ಪದವಿಗಳನ್ನು ಪಡೆದಿದ್ದರು ಹಾಗೂ ದೇಶದ ಮೊದಲ ಕಾನೂನು ಮಂತ್ರಿಯೂ ಆಗಿದ್ದರು ಎಂದು ಹೇಳಿದರು.

ಒಂದು ಜನಾಂಗಕ್ಕೆ ಉತ್ವಲ ಭವಿಷ್ಯ ಕೊಡುವ ನಿಟ್ಟಿನಲ್ಲಿ ಅಂಬೇಡ್ಕರ್ ತಮ್ಮ ಜೀವನವನ್ನೇ ತ್ಯಾಗ ಮಾಡಿದ್ದರು. ಆದ್ದರಿಂದ ಸಮಾಜ ಸದೃಢವಾಗಲು ಪ್ರತಿಯೊಬ್ಬರು ಅಕ್ಷರಸ್ಥರಾಗಬೇಕು ಎಂದು ಹೇಳಿದರು.

ಈ ದಿನಗಳಲ್ಲೂ ಅಂಬೇಡ್ಕರ್ ಫೋಟೋ ಮನೆಯಲ್ಲಿಡಲು ಹಿಂಜರಿಯುತ್ತಾರೆ. ಅಂತವರು ಒಂದು ಸಾರಿ ಅವರ ಜೀವನ ಚರಿತ್ರೆ ಓದಿದರೇ ಸಮಾಜಕ್ಕೆ ನೀಡಿದ ಅವರ ನಿಸ್ವಾರ್ಥ ಕೊಡುಗೆ ತಿಳಿಯಲಿದೆ ಎಂದು ಹೇಳಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್ ಹೆಗಡೆ, 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾದೀಶ ಜೆ.ವಿ. ವಿಜಯಾನಂದ, ಕಾನೂನು ಅಧಿಕಾರಿ ಎ.ಎಂ ಬಸವರಾಜು, ಸರ್ಕಾರಿ ಅಭಿಯೋಜಕ ಬಿ. ಮಂಜುನಾಥ್, ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ ಕುಮಾರ್ ಮತ್ತು ಇತರರು ಇದ್ದರು.

## ಹರಪನಹಳ್ಳಿ ತಾಲ್ಲೂಕಿನಲ್ಲಿ ಇಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪ್ರವಾಸ



ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಹರಪನಹಳ್ಳಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಇಂದು ಚುನಾವಣಾ ಪ್ರಚಾರ ಸಭೆ ನಡೆಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಂಜಿನಪ್ಪ ಮತ್ತು ಕುಬೇರಪ್ಪ ತಿಳಿಸಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ತೆಲಗಿಯಲ್ಲಿ ಚುನಾವಣಾ ಪ್ರಚಾರ ಸಭೆ, ಮಧ್ಯಾಹ್ನ 1ಕ್ಕೆ ಹಲುವಾಗಲಿನಲ್ಲಿ ಚುನಾವಣಾ ಪ್ರಚಾರ ಸಭೆ, ಮಧ್ಯಾಹ್ನ 3ಕ್ಕೆ ಹಾರಕನಾಳುನಲ್ಲಿ ಚುನಾವಣಾ ಪ್ರಚಾರ ಸಭೆ, ಮಧ್ಯಾಹ್ನ 5ಕ್ಕೆ ಚಿಗಟೇರಿಯಲ್ಲಿ ಸಚಿವರು ಚುನಾವಣಾ ಪ್ರಚಾರ ಸಭೆಯನ್ನು ನಡೆಸುವರು.

## ಜಗಳೂರು ತಾ.ನಲ್ಲಿ ಇಂದು ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಎಸ್ಸೆಸ್ಸೆಂ ಪ್ರವಾಸ



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಜಗಳೂರು ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಅಣಬೂರು ಗ್ರಾಮದಿಂದ ಬೆಳಿಗ್ಗೆ 10 ರಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಅವರು ಹನುಂತಾಪುರ, ತರಳಬಾಳು ಕೇಂದ್ರ, ಹಿರೇಮಲ್ಲನಹೊಳೆ, ಮುಸ್ಟೂರು, ಕಲ್ಲೇದೇವರಪುರ, ದೊಣ್ಣೆಹಳ್ಳಿ, ತೋರಣಗಟ್ಟೆ, ಬಿದರಕೆರೆ, ಬಿಸ್ತುವಳ್ಳಿ ಗ್ರಾಮಗಳಲ್ಲಿ ರಾತ್ರಿ 7.30 ರವರೆಗೆ ಮತಯಾಚನೆ ಮಾಡುವರು. ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕ ಬಿ.ದೇವೇಂದ್ರಪ್ಪ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಷಂಶೀದ್ ಅಲಿ ಮತ್ತು ಕಂಬತ್ತಹಳ್ಳಿ ಮಂಜುನಾಥ್ ತಿಳಿಸಿದ್ದಾರೆ.

## ಹರಿಹರದಲ್ಲಿ ಇಂದು ಬಿಜೆಪಿ ಅಧ್ಯಕ್ಷ ವಿಜಯೇಂದ್ರ ರೋಡ್ ಶೋ




ಹರಿಹರ, ಏ,24- ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನಾಳೆ ದಿನಾಂಕ 25 ರ ಗುರುವಾರ ನಗರಕ್ಕೆ ಆಗಮಿಸಿ, ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಜಿ.ಎಂ. ಸಿದ್ದೇಶ್ವರ ಪರವಾಗಿ ರೋಡ್ ಶೋ ನಡೆಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ರಾಜಶೇಖರ್ ನಾಗಪ್ಪ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಗುರುವಾರ ಸಂಜೆ 4 ಗಂಟೆಗೆ ನಗರಕ್ಕೆ ಆಗಮಿಸುವ ವಿಜಯೇಂದ್ರ ಅವರು ಶಿವಮೊಗ್ಗ ರಸ್ತೆಯ ಪಕ್ಕೀರೇಶ್ವರ ಮಠದ ಮುಂಭಾಗದಿಂದ ಬೃಹತ್ ರೋಡ್ ಶೋನಲ್ಲಿ ಪಾಲ್ಗೊಂಡು ಮತಯಾಚನೆ ಮಾಡಲಿದ್ದಾರೆ. ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆಯಲ್ಲಿ ಸಂಚರಿಸಿ ಗಾಂಧಿ ವೃತ್ತದಲ್ಲಿ ಅಂತ್ಯಗೊಳ್ಳಲಿದೆ.

ಸಂಸದ ಜಿ.ಎಂ. ಸಿದ್ದೇಶ್ವರ, ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಜಿಲ್ಲಾ ಬಿಜೆಪಿ ಸಂಚಾಲಕ ಎಸ್.ಎಂ. ವೀರೇಶ್ ಹನಗವಾಡಿ, ತಾಲ್ಲೂಕು ಸಂಚಾಲಕ ರಾಜು ರೋಖಡೆ, ಜೆಡಿಎಸ್ ಗ್ರಾಮಾಂತರ ಘಟಕದ ಅಧ್ಯಕ್ಷ ಪರಮೇಶ್ವರಪ್ಪ, ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಗಟ್ಟೆ ನಗರ ಅಧ್ಯಕ್ಷ ಅಜಿತ್ ಸಾವಂತ್ ಸೇರಿದಂತೆ ಹಲವಾರು ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಣ್ಣಪ್ಪ ಐರಣಿ ಮಾತನಾಡಿ, ಈ ರೋಡ್ ಶೋನಲ್ಲಿ 10 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದ್ದು, ತಾಲ್ಲೂಕಿನಿಂದ ಸುಮಾರು 30 ಸಾವಿರಕ್ಕೂ ಹೆಚ್ಚು ಮತಗಳ ಲೀಡ್ ಗಾಯತ್ರಿ ಸಿದ್ದೇಶ್ವರ ಅವರಿಗೆ ಲಭಿಸಲಿವೆ ಎಂದು ಹೇಳಿದರು.

ಪತ್ರಿಕಾ ಗೋಷ್ಠಿಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ಹೆಚ್. ಮಂಜಾನಾಯ್ಕ್, ತುಳಜಪ್ಪ ಭೂತೆ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ಅಡಕಿ ಕುಮಾರ್, ಬಿಜೆಪಿ ಯುವ ಘಟಕದ ಅಧ್ಯಕ್ಷ ರವಿರಾಯ್ಕರ್, ಬಿಜೆಪಿ ಮುಖಂಡ ಸುನೀಲ್ ಇತರರು ಹಾಜರಿದ್ದರು.

## ಅಧಿವಕ್ತಾ ಪರಿಷತ್ತಿನಿಂದ ನಗರದಲ್ಲಿ ಇಂದು ಮತದಾನ ಜಾಗೃತಿ ಕಾರ್ಯಕ್ರಮ

ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ ದಾವಣಗೆರೆ ಜಿಲ್ಲಾ ಘಟಕ ಮತ್ತು ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಅಥಣಿ ಸ್ನಾತಕೋತ್ತರ ಕೇಂದ್ರ, ಇವರುಗಳ ಸಂಯುಕ್ತಾಶ್ರಯದಲ್ಲಿ ಅಥಣಿ ಸ್ನಾತಕೋತ್ತರ ಕೇಂದ್ರ, ಕಾಲೇಜಿನ ಆವರಣದಲ್ಲಿ ಮತದಾನ ಜಾಗೃತಿಯನ್ನು ಇಂದು ಬೆಳಿಗ್ಗೆ 10 ಕ್ಕೆ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಭಾಗವಹಿಸವರು. ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ.ಕೆ. ಷಣ್ಮುಖಪ್ಪ ಕಾರ್ಯಕ್ರಮ ಅಧ್ಯಕ್ಷತೆ ವಹಿಸುವರು. ಹಿರಿಯ ವಕೀಲರಾದ ಎಲ್. ದಯಾನಂದ್, ಬಿ.ಜಿ.ಗೀತಾ ಪಾಟೀಲ್ ಉಪಸ್ಥಿತರಿರುವರು ಎಂದು ಅಧಿವಕ್ತಾ ಪರಿಷತ್ ಕರ್ನಾಟಕ ಪ್ರಾಂತದ ರಾಜ್ಯ ಉಪಾಧ್ಯಕ್ಷರೂ ಆದ ವಕೀಲ ಯೋಗೇಶ್ವರಪ್ಪ ಆರ್. ತಿಳಿಸಿದ್ದಾರೆ.

## ನಾಳೆ ವಿಶ್ವಕರ್ಮ ಸಮಾಜದಿಂದ ಉಪನಯನ, ವಿವಾಹ ಮಹೋತ್ಸವ

ದಾವಣಗೆರೆ, ಏ. 24- ವಿಶ್ವಕರ್ಮ ಸಮಾಜ ಸಂಘ ಹಾಗೂ ಜಿಲ್ಲೆಯ ವಿಶ್ವಕರ್ಮ ಸಮಾಜದ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ 41ನೇ ವರ್ಷದ ಸಾಮೂಹಿಕ ಉಪನಯನ ಹಾಗೂ ವಿವಾಹ ಮಹೋತ್ಸವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 26ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ವಿ.ಎಂ. ಕೊಟ್ರೇಶಾಚಾರ್ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ಸಮಾರಂಭ ನಡೆಯಲಿದೆ. ನಾಳೆ ದಿನಾಂಕ 25ರ ಗುರುವಾರ ಸಂಜೆ 7 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ದಿನಾಂಕ 26ರ ಶುಕ್ರವಾರ ಬೆಳಿಗ್ಗೆ 9.30 ರಿಂದ 10.30ರವರೆಗೆ ಯಜ್ಞೋಪವೀತ ಧಾರಣೆ ಹಾಗೂ ಬ್ರಹ್ಮೋಪದೇಶವಿದೆ. ಬೆಳಿಗ್ಗೆ 10.30ಕ್ಕೆ ಸಾಮೂಹಿಕ ವಿವಾಹಗಳು ಜರುಗಲಿವೆ.

11 ಗಂಟೆಗೆ ಏರ್ಪಾಡಾಗಿರುವ ಸಭಾ ಕಾರ್ಯಕ್ರಮವನ್ನು ಜವಳಿ ವರ್ತಕ ಬಿ.ಸಿ. ಉಮಾಪತಿ ಉದ್ಘಾಟಿಸಲಿದ್ದಾರೆ. ವಿಶ್ವಕರ್ಮ ಸಮಾಜ ಸಂಘದ ಅಧ್ಯಕ್ಷ ಬಸಾಪುರದ ಬಿ.ನಾಗೇಂದ್ರಾಚಾರ್ ಅಧ್ಯಕ್ಷತೆ ವಹಿಸಲಿದ್ದು, ಬಿ.ಎಲ್. ಸೀತಾರಾಮಾಚಾರ್, ಎನ್. ಪೂರ್ವಾಚಾರ್, ಬಿ.ಪಿ. ಜಗನ್ನಾಥ್, ಎಸ್. ರುದ್ರಾಚಾರ್ ಇತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಬಸಾಪುರದ ಬಿ.ನಾಗೇಂದ್ರಚಾರ್, ನಿರ್ದೇಶಕರುಗಳಾದ ಮಂಜುನಾಥ ಬೇತೂರು, ಬಿ.ಸಿದ್ದಾಚಾರ್, ಜಿ.ಬಿ. ಬ್ರಹ್ಮಾಚಾರ್ ಉಪಸ್ಥಿತರಿದ್ದರು.

## ಇಂದು ವಿಕಲಚೇತನರಿಂದ ಬೈಕ್ ಜಾಥಾ

ಲೋಕಸಭಾ ಚುನಾವಣೆ ಪ್ರಯುಕ್ತ ಇಂದು ಬೆಳಿಗ್ಗೆ 10 ಗಂಟೆಗೆ ಮತದಾನ ಕುರಿತು ಜಾಗೃತಿ ಮೂಡಿಸಲು ವಿಕಲಚೇತನರಿಂದ ಬೈಕ್ ಜಾಥಾ ನಡೆಯಲಿದೆ. ಜಾಥಾವು ಹೊಸ ತಾಲ್ಲೂಕು ಪಂಚಾಯಿತಿ ಕಚೇರಿಯಿಂದ ಆರಂಭವಾಗಲಿದೆ.

## ಹರಪನಹಳ್ಳಿ : ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪ್ರತಾಪ್ ಛಲವಾದಿ ಆಯ್ಕೆ



ಹರಪನಹಳ್ಳಿ, ಏ. 24 - ವಿಜಯನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕೆಪಿಸಿಸಿಯ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಘಟಕದ ಸದಸ್ಯರನ್ನಾಗಿ ಹರಪನಹಳ್ಳಿ ತಾಲ್ಲೂಕು ಛಲವಾದಿ ಮಹಾಸಭಾದ ಅಧ್ಯಕ್ಷ ಪ್ರತಾಪ್ ಛಲವಾದಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸೋಮಶೇಖರ್ ಬಣ್ಣದ ಮನೆ ತಿಳಿಸಿದ್ದಾರೆ.

ಹೊಸಪೇಟೆ ತಾಲ್ಲೂಕಿನ ಜಿಲ್ಲಾಧ್ಯಕ್ಷರ ಸಭಾಂಗಣದಲ್ಲಿ ಜರುಗಿದ ಸುದ್ದಿ ಗೋಷ್ಠಿಯಲ್ಲಿ ವಿಜಯನಗರ ಜಿಲ್ಲಾಧ್ಯಕ್ಷ ಸಿರಾಜ್ ಶೇಖ್ ಮಾತನಾಡಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್. ಧರ್ಮಸೇನಾ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಆದೇಶದ ಮೇರೆಗೆ ಈ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಕೆ.ಎಂ. ಹಾಲಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಬಗಲ್ ರಾಮಕೃಷ್ಣ, ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ತಮ್ಮಣ್ಣಪ್ಪ, ಸೇವಾದಳ ಜಿಲ್ಲಾ ಸಂಘಟಕ ಬಿ. ಮಾರೆಣ್ಣ, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಡಿ. ವೆಂಕಟರಮಣ,ಇನ್ ಟೆಕ್ ವಿಭಾಗದ ಜಿಲ್ಲಾಧ್ಯಕ್ಷ ಏಕಾಂಬರೇಶ ನಾಯ್ಕ, ಮುಖಂಡ ಕೋರಿ ಶಿವರಾಮಪ್ಪ ಇತರರು ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ನಾಲ್ಕು ದಿನ ಬಿಸಿಗಾಳಿಯ ವಾತಾವರಣ

ಬೆಂಗಳೂರು, ಏ. 24 – ದಾವಣಗೆರೆ ಜಿಲ್ಲೆಯಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಬಿಸಿ ಗಾಳಿಯ ಪರಿಸ್ಥಿತಿ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನಾಳೆ ಗುರುವಾರದಿಂದ ಭಾನುವಾರದವರೆಗೆ ಬಿಸಿಗಾಳಿಯ ಪರಿಸ್ಥಿತಿ ಇರಲಿದೆ. ಈ ಅವಧಿಯಲ್ಲಿ ಗರಿಷ್ಠ ತಾಪಮಾನವು ವಾಡಿಕೆಗಿಂತ 2-3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿರಲಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ನಿಂದ 1 ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಶ್ರೀಮತಿ ಮಲ್ಲಮ್ಮ ವೀರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ಗುಂಡೇರಿ. ಅಸಗೋಡು, ಶ್ರೀಮತಿ ದಾಕ್ಷಾಯಿಣಿ ಎಂ. ಶ್ರೀ ಎಂ. ಎಂ.ಆಚಾರ್, ಶ್ರೀಮತಿ ಪದ್ಮಾ ಅರುಣ್ ಮತ್ತು ಸಂಜನಾ ಕೌಶಿಕ್ ಅವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

## 28ರಂದು ನಗರದಲ್ಲಿ ಕಣ್ಣಿನ ಪರೀಕ್ಷೆ

ದಾವಣಗೆರೆ, ಏ. 24 - ನಗರದ ನೇತ್ರಾಲಯ ಐ ಕೇರ್ ಸೆಂಟರ್‌ನಲ್ಲಿ ಇದೇ ದಿನಾಂಕ 28ರ ಭಾನುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ರವರೆಗೆ ಸಕ್ಕರೆ ಕಾಯಿಲೆ ಇರುವವರಿಗೆ ಉಚಿತವಾಗಿ ಕಣ್ಣಿನ ಪರೀಕ್ಷೆಯನ್ನು ಮಾಡಲಾಗುತ್ತದೆ.

# ಅಭಿವೃದ್ಧಿ ಬದ್ಧತೆ ನಮಗೆ ಇದೆ : ಶಾಸಕ ಎಸ್ಸೆಸ್

ದಾವಣಗೆರೆ, ಏ. 24 - ಅಭಿವೃದ್ಧಿ ಬಗ್ಗೆ ನಮಗೆ ಬದ್ದತೆ ಇದೆ. ನಾವು ಯಾವುದೇ ಸರ್ಕಾರ ಇದ್ದರೂ ಸಹ ದಾವಣಗೆರೆ ಅಭಿವೃದ್ಧಿಗೆ ಬದ್ದರಿದ್ದೇವೆ. ನೀವೂ ಸಹ ನಮ್ಮನ್ನು ಬೆಂಬಲಿಸುವ ಮೂಲಕ ದಾವಣಗೆರೆ ಅಭಿವೃದ್ಧಿಗೆ ಸಹಕರಿಸಬೇಕೆಂದು ಶಾಸಕ ಶಾಮನೂರು ಶಿವಶಂಕರಪ್ಪ ಕರೆ ನೀಡಿದರು.

ಪಾಲಿಕೆಯ 6ನೇ ವಾರ್ಡ್‌ನಲ್ಲಿ ಇಂದು ಏರ್ಪಾಡಾಗಿದ್ದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ನಾನಾಗಲೀ, ಸಚಿವ ಮಲ್ಲಿಕಾರ್ಜುನ್ ಆಗಲೀ ದಾವಣಗೆರೆ ಅಭಿವೃದ್ಧಿಗೆ ಕಂಕಣಬದ್ಧರಾಗಿ ಕೆಲಸ ಮಾಡಿದ್ದೇವೆ. ಸರ್ವ ಜನಾಂಗಕ್ಕೂ ಒಳಿತನ್ನು ಬಯಸುವ ಪಕ್ಷ ಕಾಂಗ್ರೆಸ್ ಪಕ್ಷ. ಆ ಪಕ್ಷದ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ನೇಮಿಸಿದ್ದು, ಬರುವ ತಿಂಗಳು 7ರಂದು ನಡೆಯುವ ಮತದಾನದ ವೇಳೆ ಅತಿಹೆಚ್ಚು ಮತದಾನ ಮಾಡುವ ಮೂಲಕ ದೆಹಲಿಗೆ ಕಳುಹಿಸಿಕೊಡಬೇಕೆಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಮಾತನಾಡಿ, ಪ್ರಧಾನಿ ಸೋಲಿನ ಭಯದಿಂದ ಹತಾಶರಾಗಿ ಮಾತನಾಡುತ್ತಿದ್ದಾರೆ. ಈಗಾಗಲೇ ಸುಳ್ಳಿನ ಸರ್ಕಾರ ನಡೆಸಿದ ಬಿಜೆಪಿಗೆ ಸೋಲಿನ ಹತಾಶೆ ಕಾಡುತ್ತಿದ್ದು, ಇದರಿಂದಾಗಿಯೇ ಸಣ್ಣಪುಟ್ಟ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ ಎಂದರು.

ಕಾಂಗ್ರೆಸ್ ಮುಖಂಡ ಸಾಧಿಕ್ ಪೈಲ್ವಾನ್, ಅನಿತಾಬಾಯಿ ಮಾಲತೇಶ್, ಮಹಾನಗರ ಪಾಲಿಕೆ ಸದಸ್ಯ ಎಲ್.ಡಿ. ಗೋಣೆಪ್ಪ., ಮಾಜಿ ಮೇಯರ್ ಗೋಣೆಪ್ಪ, ಕುರುಬರಕೇರಿ ಮಂಜುನಾಥ್, ಎಸ್. ಮಲ್ಲಿಕಾರ್ಜುನ್, ಸುರೇಶ್ ಮತ್ತಿತರರು ಮಾತನಾಡಿ, ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ದಾವಣಗೆರೆಯನ್ನು ಪ್ರತಿನಿಧಿಸಿದರೆ, ದಾವಣಗೆರೆ ಜಿಲ್ಲೆಗೆ ಆಗುವ ಉಪಯೋಗವನ್ನು ಕಾರ್ಯಕರ್ತರಿಗೆ ಮನದಟ್ಟು ಮಾಡಿಕೊಟ್ಟರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ವಾರ್ಡ್ ಅಧ್ಯಕ್ಷ ಸಾಲುಮನಿ ಬಸವರಾಜ್, ನಗರಸಭೆ ಮಾಜಿ ಅಧ್ಯಕ್ಷ ಮಂಜುನಾಥ್, ಜಮ್ನಳ್ಳಿ ನಾಗರಾಜ್, ಅಜ್ಜಪ್ಪ, ಕುರುಬರಕೇರಿ ರಾಜು, ಹರೀಶ್ ಮತ್ತಿತರರು ಉಪಸ್ಥಿತರಿದ್ದರು.




# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು ಆನೆಕೊಂಡ ಗ್ರಾಮದ 1) ಗಂಗಮ್ಮ ಕೊ. ಕಲ್ಲಪ್ಪ 2) ಶಾಮನೂರು ಗ್ರಾಮದ ಸರ್ವಮ್ಮ ಕೋಂ ಸಿದ್ದಪ್ಪ 3) ದೊಡ್ಡಘಟ್ಟ ಗ್ರಾಮದ ಗಿರಿಜಮ್ಮ ಕೋಂ. ಮಂಜಪ್ಪ ಇವರುಗಳು ಮಾನ್ಯ ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅಸಲು ದಾವೆ ನಂ. 375/2022ನ್ನು ಶಾಮನೂರು ಗ್ರಾಮದ ನಿವಾಸಿಗಳಾದ 1) ನಾಗರಾಜ್ ಬಿನ್ ಮಹಾದೇವಪ್ಪ 2) ಸಿದ್ದಪ್ಪ ಬಿನ್ ಮಹಾದೇವಪ್ಪ 3) ಮಂಗಳ ತಂದೆ ಮಹಾದೇವಪ್ಪ 4) ಸುನಂದ ತಂದೆ ಮಹಾದೇವಪ್ಪ 5) ಅಜ್ಜಪ್ಪ ಬಿನ್ ಮಹಾದೇವಪ್ಪ 6) ಪಾರಮ್ಮ ಕೋಂ ಲೇಟ್ ಪಾಲಾಕ್ಷಪ್ಪ 7) ಗಿರಿಯಜ್ಜಿ ನಾಗರಾಜಪ್ಪ ಸೌಭಾಗ್ಯಮ್ಮ ಕೋಂ ಲೇಟ್ ಜಯ್ಯಪ್ಪ 8) ವೀಣಾ ತಂದೆ ಜಯ್ಯಪ್ಪ 9) ಬಸವರಾಜ ಬಿನ್ ಜಯ್ಯಪ್ಪ 10) ನಾರಪ್ಪ ಬಿನ್ ಲೇಟ್ ಜಯ್ಯಪ್ಪ 11) ಉಮಾಪತಿ ಬಿನ್ ಲೇಟ್ ಬಸಪ್ಪ 12) ಎಸ್. ಲಿಂಗರಾಜು ಬಿನ್ ಸಾವಕ್ಕ ಕೊಟ್ರಪ್ಪ 13) ಎಸ್.ಎಸ್. ಭಾರತಿ ಕೋಂ ಎಸ್. ಲಿಂಗರಾಜ್ 1 ರಿಂದ 10ನೇಯವರ ವಿರುದ್ಧ ಪಾಲು ವಿಭಾಗಕ್ಕೆ ಮತ್ತು ಸ್ವಾಧೀನ ಬಿಡಿಸಿಕೊಳ್ಳಲು ದಾವೆಯನ್ನು ಸಲ್ಲಿಸಿದ್ದು, 11 ಮತ್ತು 12ನೇಯವರು ದಾವಾಸ್ತಿ ಖರೀದಿ ಮಾಡಿದವರಾಗಿದ್ದು, ಈಗ ಈ ದಾವೆಯು ಇತ್ಯರ್ಥಕ್ಕೆಂದು ದಿನಾಂಕ : 04.06.2024 ರಂದು ಮುದ್ದತ್ತು ಇರುತ್ತದೆ. ಹೀಗಿದ್ದಾಗ್ಯೂ ಎದುರುದಾರರು ಕೆಳಗೆ ತೋರಿಸಿರುವ ಷೆಡ್ಯೂಲ್ ಆಸ್ತಿಗಳನ್ನು ಮಾರಾಟ ಮಾಡಲು ಹುನ್ನಾರ ನಡೆಸಿದ್ದಾರೆ ಎಂದು ತಿಳಿದು ಬಂದಿದ್ದು, ನ್ಯಾಯಾಲಯದಲ್ಲಿ ಪಾಲು ವಿಭಾಗದ ದಾವೆಯು ಇನ್ನೂ ಇತ್ಯರ್ಥವಾಗದೇ ಇರುವಾಗ ಈ ರೀತಿ ಮಾರಾಟ ಮಾಡಿದಲ್ಲಿ ತೆಗೆದುಕೊಳ್ಳುವ ಯಾವುದೇ ವ್ಯಕ್ತಿಗೆ ವಾದಿಯರ ಹಕ್ಕು, ಹಿತಾಸಕ್ತಿಗೆ ಬಾಧಕವಾಗುವುದಿಲ್ಲ. ಕಾರಣ, ಈ ಕೆಳಗೆ ತೋರಿಸಿರುವ ಷೆಡ್ಯೂಲ್ ಸ್ವತ್ತನ್ನು ಯಾರೂ ಸಹ ತೆಗೆದುಕೊಳ್ಳಬಾರದು ಎಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ. ಒಂದು ವೇಳೆ ನ್ಯಾಯಾಲಯದಲ್ಲಿ ದಾವೆಯು ಇನ್ನೂ ಇತ್ಯರ್ಥಕ್ಕೆ ಇರುವಾಗಲೇ ತೆಗೆದುಕೊಂಡಲ್ಲಿ ವಾದಿಗಳು ಯಾರೂ ಜವಾಬ್ದಾರರಲ್ಲ ತಿಳಿಯಿರಿ.

**ಷೆಡ್ಯೂಲ್ :**

1) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸ.ನಂ. 239/1ಬಿ1ರಲ್ಲಿ 1 ಎಕರೆ 20 ಗುಂಟೆ 12 ಸೆಂಟ್ಸ್ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ಜನತಾ ಕಾಲೋನಿ, ಪಶ್ಚಿಮಕ್ಕೆ : ಕುರುಬರ ಹಾಲಪ್ಪನ ಜಮೀನು, ಉತ್ತರಕ್ಕೆ : ಗುರ್ರ್ಯಳ್ಳರ ನಾಗರಾಜಪ್ಪನ ಜಮೀನು, ದಕ್ಷಿಣಕ್ಕೆ : ಸ್ವಾಗೇರ ತಿಪ್ಪೇಶಪ್ಪನ ಜಮೀನು.

2) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸ.ನಂ. 240/1 ಬೀರಲ್ಲಿ 1 ಎಕರೆ 28 ಗುಂಟೆ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ಜನತಾ ಕಾಲೋನಿ, ಪಶ್ಚಿಮಕ್ಕೆ : ಕುರುಬರ ಹಾಲಪ್ಪನ ಜಮೀನು, ಉತ್ತರಕ್ಕೆ : ಗುರ್ರ್ಯಳ್ಳರ ನಾಗರಾಜಪ್ಪನ ಜಮೀನು, ದಕ್ಷಿಣಕ್ಕೆ : ಸ್ವಾಗೇರ ತಿಪ್ಪೇಶಪ್ಪನ ಜಮೀನು.

3) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸ.ನಂ. 259/12 ರಲ್ಲಿ 2 ಎಕರೆ 36 ಗುಂಟೆ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ದೇವರಬೆಳಕೆರೆ ಡಾಬರ್ಸ್ ಕಾಲೋನಿಗೆ ಹೋಗುವ ರಸ್ತೆ, ಪಶ್ಚಿಮಕ್ಕೆ : ಗಿರಿಯಜ್ಜಿ ಮುನಿಯಪ್ಪನ ಜಮೀನು, ಉತ್ತರಕ್ಕೆ : ಯಲವಟ್ಟಿ ಮಹೇಶ್ವರಪ್ಪನ ಮನೆ, ದಕ್ಷಿಣಕ್ಕೆ : ದೇವರಬೆಳಕೆರೆ ರಸ್ತೆ.

4) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸ.ನಂ. 259/16ರಲ್ಲಿ ಎಕರೆ ಇಲ್ಲ 23 ಗುಂಟೆ ಇದರಲ್ಲಿ 04 ಗುಂಟೆ ಫೂಟ್ ಖರಾಬ್ (ಬ) ಇದ್ದು ವಜಾಜಾತ ನಿಕ್ಕಿ 19 ಗುಂಟೆ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ಎಸ್. ಭಾರತಿ ಲಿಂಗರಾಜರವರ ಜಮೀನು, ಪಶ್ಚಿಮಕ್ಕೆ : ಮುದ್ದಿ ನಗರಕ್ಕೆ ಹೋಗುವ ರಸ್ತೆ, ಉತ್ತರಕ್ಕೆ : ದೇವರ ಬೆಳಕೆರೆಗೆ ಹೋಗುವ ರಸ್ತೆ, ದಕ್ಷಿಣಕ್ಕೆ : ಹಳ್ಳೂರು ಗೌಡ್ರ ಮನೆ.

5) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸ.ನಂ. 259/14ರಲ್ಲಿ ಎಕರೆ ಇಲ್ಲ 38 ಗುಂಟೆ ಇದರಲ್ಲಿ 05 ಗುಂಟೆ ಫೂಟ್ ಖರಾಬ್ (ಬ) ಇದ್ದು ವಜಾಜಾತ ನಿಕ್ಕಿ 33 ಗುಂಟೆ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ದೇವರಬೆಳಕೆರೆ ಡಾಬರ್ಸ್ ಕಾಲೋನಿಗೆ ಹೋಗುವ ರಸ್ತೆ, ಪಶ್ಚಿಮಕ್ಕೆ : ಗಿರಿಯಜ್ಜಿ ಮುನಿಯಪ್ಪನ ಜಮೀನು, ಉತ್ತರಕ್ಕೆ : ಗೌಡ್ರ ಜಮೀನು, ದಕ್ಷಿಣಕ್ಕೆ : ದೇವರಬೆಳಕೆರೆ ರಸ್ತೆ,

6) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸ.ನಂ. 259/13ರಲ್ಲಿ 1 ಎಕರೆ 9 ಗುಂಟೆ ಇದರಲ್ಲಿ 09 ಗುಂಟೆ ಫೂಟ್ ಖರಾಬ್ (ಬ) ಇದ್ದು ವಜಾಜಾತ ನಿಕ್ಕಿ 1 ಎಕರೆ ಗುಂಟೆ ಇಲ್ಲ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ರಿ.ಸ.ನಂ. 233ರ ಜಮೀನು, ಪಶ್ಚಿಮಕ್ಕೆ : ರಿ.ಸ.ನಂ. 234ರ ಜಮೀನು, ಉತ್ತರಕ್ಕೆ : ರಿ.ಸ.ನಂ. 234/3ಎ1 ರ ಜಮೀನು, ದಕ್ಷಿಣಕ್ಕೆ : ರಿ.ಸ.ನಂ. 234/3ಎ2ರ ಜಮೀನು.

7) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸನಂ. 259/24 (ಹಳೆ ನಂ. 259/16) ರಲ್ಲಿ ಎಕರೆ ಇಲ್ಲ 10 ಗುಂಟೆ ಇದರಲ್ಲಿ 01 ಗುಂಟೆ ಫೂಟ್ ಖರಾಬ್ (ಬ) ಇದ್ದು ವಜಾಜಾತ ನಿಕ್ಕಿ 09 ಗುಂಟೆ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ಇದೇ ಸರ್ವೆ ನಂಬರ್ ಪೈಕಿ ಉಳಿದ ಜಮೀನು, ಪಶ್ಚಿಮಕ್ಕೆ : ಉಮಾಪತಿಯವರ ಬಾಬ್ತು ಉಳಿದ ಜಮೀನು, ಉತ್ತರಕ್ಕೆ : ದೇವರ ಬೆಳೆಕೆರೆ ರಸ್ತೆ, ದಕ್ಷಿಣಕ್ಕೆ : ಸ.ನಂ. 235ರ ಪೈಕಿ ಜಮೀನು.

8) ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ.ಸನಂ. 259/15ರಲ್ಲಿ 1 ಎಕರೆ 03 ಗುಂಟೆ ಇದರಲ್ಲಿ 03 ಗುಂಟೆ ಫೂಟ್ ಖರಾಬ್ (ಬ) ಇದ್ದು, ವಜಾಜಾತ ನಿಕ್ಕಿ 1 ಎಕರೆ ಗುಂಟೆ ಇಲ್ಲ. ಜಮೀನಿಗೆ ಚಕ್ಕುಬಂದಿ.

ಪೂರ್ವಕ್ಕೆ : ರಿ.ಸ.ನಂ. 259/16ರ ಜಮೀನು, ಪಶ್ಚಿಮಕ್ಕೆ : ರಿ.ಸ.ನಂ. 259/14ರ ಜಮೀನು, ಉತ್ತರಕ್ಕೆ : ದೇವರಬೆಳಕೆರೆ ರಸ್ತೆ, ದಕ್ಷಿಣಕ್ಕೆ : ರಿ.ಸ.ನಂ. 236 ರ ಜಮೀನು.

**ಸಹಿ/- ಬಿ.ಎಸ್. ಲಿಂಗರಾಜ**
**ವಕೀಲರು, ಬಿ.ಎ., ಬಿ.ಎಡ್., ಎಲ್.ಎಲ್.ಬಿ.,**
**ಕೆಎಆರ್ ನಂ. 1283/ಡಿ6, # 522/94, "ಅವಿಗ್ನಾ" ಶಿವಕುಮಾರಸ್ವಾಮಿ ಬಡಾವಣೆ,**
**2ನೇ ಹಂತ, ದಾವಣಗೆರೆ-577 004. ಮೊ. : 9844467191**

**ದಿನಾಂಕ : 24.04.2024**
**ಸ್ಥಳ : ದಾವಣಗೆರೆ.**

# ಕ್ಷೇತ್ರದಲ್ಲಿ 17,09,244 ಮತದಾರರು

## ದಾವಣಗೆರೆ ಕ್ಷೇತ್ರದಲ್ಲಿ ಪುರುಷರಿಗಿಂತ ಮಹಿಳಾ ಮತದಾರರೇ ಅಧಿಕ

ದಾವಣಗೆರೆ, ಏ.24- ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಅಂತಿಮವಾಗಿ 17,09,244 ಮತದಾರರಿದ್ದಾರೆ. ಇದರಲ್ಲಿ ಪುರುಷರು 8,51,990, ಮಹಿಳೆಯರು 8,57,117 ಹಾಗೂ ತೃತೀಯ ಲಿಂಗ 137 ಮತದಾರರಿದ್ದಾರೆ. ದಾವಣಗೆರೆ ಕ್ಷೇತ್ರದಲ್ಲಿ ಪುರುಷರಿಗಿಂತ 5127 ಮಹಿಳಾ ಮತದಾರಿದ್ದಾರೆ.

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದ್ದು, ಮನೆಯಲ್ಲಿಯೇ ಮತದಾನ ಪ್ರಕ್ರಿಯೆ ಏ.25 ರಿಂದ 27 ರ ವರೆಗೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಚುನಾವಣಾ ಅಭ್ಯರ್ಥಿಗಳು ಹಾಗೂ ಅಭ್ಯರ್ಥಿಗಳ ಏಜೆಂಟರೊಂದಿಗೆ ನಡೆಸಲಾದ ಸಭೆಯಲ್ಲಿ ಮಾತನಾಡಿದರು.

85 ವರ್ಷ ಮೇಲ್ಪಟ್ಟ ಮತ್ತು ವಿಶೇಷಚೇತನ ಮತದಾರರಿಗೆ ಮನೆಯಲ್ಲಿಯೇ ಮತದಾನ ಮಾಡಲು ಆಯೋಗ ಅವಕಾಶ ಕಲ್ಪಿಸಿದೆ. ಈಗಾಗಲೇ ಮತದಾರರ ಮನೆ ಬಾಗಿಲಿಗೆ ಬಿ.ಎಲ್.ಓ. ತೆರಳಿ ಇಆರ್‌ಓ ನೆಟ್‌ನಲ್ಲಿ ನೋಂದಾಯಿಸಿ ನಮೂನೆ-12ಡಿ ರಡಿ ಘೋಷಣಾ ಪತ್ರ ಪಡೆದು ಮಾರ್ಕ್ ಮಾಡಲಾಗಿದೆ.

ಕ್ಷೇತ್ರದಲ್ಲಿ ವಿಶೇಷಚೇತನರು 804, ಹಿರಿಯ ನಾಗರಿಕರಾದ 85 ವರ್ಷ ಮೇಲ್ಪಟ್ಟವರು 1458 ಮತದಾರರು ನೋಂದಾಯಿಸಿದ್ದು ಏ.25 ರ ಬೆಳಗ್ಗೆ 9 ಗಂಟೆಯಿಂದ ಮನೆಯಲ್ಲಿಯೇ ಮತದಾನ ಆರಂಭವಾಗಲಿ ದೆ. ಇದು ಏ.26 ಮತ್ತು ಕೊನೆಯ ಭೇಟಿಯಾಗಿ ಏ.27 ರವರೆಗೆ ನಡೆಯಲಿದೆ. ಮನೆಯಲ್ಲಿಯೇ ಮತದಾನ ಮಾಡಲು ಪ್ರತಿ ತಂಡದಲ್ಲಿ ಸೆಕ್ಟರ್ ಅಧಿಕಾರಿ, ಮತಗಟ್ಟೆ ಅಧಿಕಾರಿ, ಮತದಾನ ಅಧಿಕಾರಿ, ಮೈಕ್ರೋ ಅಬ್ಸರ್‌ವರ್, ವಿಡಿಯೋಗ್ರಾಫರ್, ಪೊಲೀಸ್ ಸಿಬ್ಬಂದಿ ಇದ್ದು ಒಟ್ಟು 82 ಮಾರ್ಗಗಳನ್ನು ರಚಿಸಲಾಗಿದೆ ಎಂದರು.

ಮತದಾರರ ವಿವರವನ್ನು ಅಭ್ಯರ್ಥಿಗಳಿಗೆ ನೀಡುವ ಮೂಲಕ ಮತಗಟ್ಟೆ ಮಟ್ಟದ ಏಜೆಂಟರ ಪಟ್ಟಿಯನ್ನು ನೀಡಲು ಅಭ್ಯರ್ಥಿಗಳಿಗೆ ತಿಳಿಸಿ 30 ಜನ ಅಭ್ಯರ್ಥಿ ಗಳಿರುವುದರಿಂದ ಮತದಾನ ದಿನ ಎರಡು ಬ್ಯಾಲೆಟ್ ಯುನಿಟ್ ಬಳಕೆ ಮಾಡಲಾಗುತ್ತಿದೆ. ಹೆಚ್ಚುವರಿಯಾಗಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಿಂದ ಬ್ಯಾಲೆಟ್ ಯುನಿಟ್‌ಗಳು ಬಂದಿದ್ದು, ಒಂದೆರಡು ದಿನಗಳಲ್ಲಿ ಮೊದಲ ಹಂತದ ಪರಿಶೀಲನೆ ನಡೆಸಿ ರ್‍ಯಾಂಡಮೈಜೇಷನ್ ಮಾಡಿ ಆಯಾ ಕ್ಷೇತ್ರಗಳ ಇವಿಎಂ ಸ್ಟ್ರಾಂಗ್ ರೂಂನಲ್ಲಿ ದಾಸ್ತಾನು ಮಾಡಲಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಸಹಾಯಕ ಚುನಾವಣಾಧಿಕಾರಿಗಳಾದ ಸೈಯ್ಯದಾ ಆಫ್ರಿನ್ ಭಾನು ಎಸ್.ಬಳ್ಳಾರಿ, ಎ.ಆರ್.ಓ. ಗಳಾದ ದುರ್ಗಶ್ರೀ. ಎನ್, ರೇಣುಕಾ, ಭಾವನಾ ಹಾಗೂ ಕಣದಲ್ಲಿನ ಅಭ್ಯರ್ಥಿಗಳು, ಏಜೆಂಟರು ಉಪಸ್ಥಿತರಿದ್ದರು.



ದಾವಣಗೆರೆ ಮಹಾನಗರ ಪಾಲಿಕೆ ಕಟ್ಟಡದ ಮೇಲೆ ಮತದಾನ ಜಾಗೃತಿಗಾಗಿ 12 ಅಡಿ ಸುತ್ತಳತೆಯುಳ್ಳ ಹೀಲಿಯಂ ತುಂಬಿದ ಬಲೂನ್ ಹಾರಿಬಿಡಲಾಯಿತು.

### ಕ್ಷೇತ್ರವಾರು ಮತದಾರರು

**ಜಗಳೂರು 1,00,046 ಪುರುಷ, 9,8759 ಮಹಿಳಾ, 10 ಇತರೆ ಸೇರಿ 1,98,815, ಹರಪನಹಳ್ಳಿ 1,12,969 ಪುರುಷ, ,10,985 ಮಹಿಳಾ, 19 ಇತರೆ ಸೇರಿ 2,23,973, ಹರಿಹರ 1,05,510 ಪುರುಷ, 1,06,870 ಮಹಿಳೆ, 17 ಇತರೆ ಒಟ್ಟು 2,12,397, ದಾವಣಗೆರೆ ಉತ್ತರ 1,24,485 ಪುರುಷ, 1,28,635 ಮಹಿಳೆ, 36 ಇತರೆ ಸೇರಿ 2,53,156, ದಕ್ಷಿಣ 1,09,184 ಪುರುಷ, 1,11,774 ಮಹಿಳೆ, 39 ಇತರೆ ಸೇರಿ 2,20,997, ಮಾಯಕೊಂಡ 97,759 ಪುರುಷ, 97,326 ಮಹಿಳೆ, 4 ಇತರೆ ಸೇರಿ 1,95,089, ಚನ್ನಗಿರಿ 101653 ಪುರುಷ, 1,02,208 ಮಹಿಳೆ, 9 ಇತರೆ ಸೇರಿ 203870 ಹಾಗೂ ಹೊನ್ನಾಳಿ ಕ್ಷೇತ್ರದಲ್ಲಿ 1,00,384 ಪುರುಷ, 1,00,560 ಮಹಿಳೆ ಹಾಗೂ 3 ಇತರೆ ಸೇರಿ 2,00,947 ಮತದಾರರಿದ್ದಾರೆ.**

# ಹರಿಹರಕ್ಕೆ ಸಂಸದ ಸಿದ್ದೇಶ್ವರ ಕೊಡುಗೆ ಅಪಾರ ಅಭಿವೃದ್ಧಿಯೋ-ಅಕ್ರಮವೋ ನೀವೇ ಯೋಚಿಸಿ



ಹರಿಹರ, ಏ.24- ಜಿಲ್ಲಾ ಉಸ್ತುವಾರಿ ಸಚಿವರು ಅಭಿವೃದ್ಧಿಗಿಂತ ಅಕ್ರಮ ಮರಳುಗಾರಿಕೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಚುನಾವಣೆ ಬಂತು, ಪತ್ನಿ ಅಭ್ಯರ್ಥಿ ಎಂದು ಈಗ ಅಭಿವೃದ್ಧಿ ಜಪ ಮಾಡುತ್ತಿದ್ದಾರೆ. ಅಂತಹವರಿಗೆ ಜನ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ಹರಿಹರ ತಾಲ್ಲೂಕಿನ ಸಾರಥಿ, ಚಿಕ್ಕಬಿದರಿ, ಪಾಮೇನಹಳ್ಳಿ, ದೀಟೂರು ಗ್ರಾಮಗಳಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ಹರಿಹರ ತಾಲ್ಲೂಕಿನಲ್ಲಿ ಸಚಿವರ ಅಕ್ರಮ ಮರಗಳುಗಾರಿಕೆ ಬಗ್ಗೆ ಶಾಸಕ ಬಿ.ಪಿ.ಹರೀಶ್ ಅವರು ಧ್ವನಿ ಎತ್ತಿದ್ದಾರೆ. ಆದರೆ, ಸಚಿವರ ಹಿಂಬಾಲಕರು ಶಾಸಕರಿಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದರೆ ಇನ್ನೂ ಸಾಮಾನ್ಯ ಜನರ ಪರಿಸ್ಥಿತಿ ಏನು ನೀವೇ ಯೋಜನೆ ಮಾಡಿ. ಇಂತಹವರಿಗೆ ಅಧಿಕಾರ ಕೊಟ್ಟರೆ ನಮ್ಮ- ನಿಮ್ಮ ಬದುಕು ದುಸ್ಥಿರವಾಗುತ್ತೆ. ನಿಮಗೆ ಬೇಕಿರುವುದು ಅಭಿವೃದ್ಧಿಯೋ... ಅಕ್ರಮವೋ ನೀವೇ ಯೋಚಿಸಿ ಎಂದರು.

ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಮತ್ತು ಹಾಲಿ ಶಾಸಕ ಬಿ.ಪಿ.ಹರೀಶ್ ಅವರು ಹರಿಹರ ತಾಲ್ಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಸಂಸದ ಜಿ.ಎಂ.ಸಿದ್ದೇಶ್ವರ ಇಚ್ಛಾಶಕ್ತಿಯಿಂದ ಅಮೃತ್ ಭಾರತ್ ಸ್ಟೇಷನ್ ಯೋಜನೆ ಅಡಿ ಹರಿಹರ ನಗರದಲ್ಲಿ 25 ಕೋಟಿ ವೆಚ್ಚದಲ್ಲಿ ಸುಸಜ್ಜಿತ ನೂತನ ರೈಲ್ವೆ ನಿಲ್ದಾಣ, ಫ್ಲಾಟ್ ಫಾರ್ಮ್ ವಿಸ್ತರಣೆ ಕಾಮಗಾರಿ ನಡೆಯುತ್ತಿದೆ. ಅಮರಾವತಿ ಬಳಿ 28 ಕೋಟಿ ರೂಪಾಯಿ ವೆಚ್ಚದಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ ಮಾಡಲಾಗಿದೆ. ಚಿಕ್ಕಜಾಜೂರಿನಿಂದ ಹರಿಹರದವರೆಗೂ 84 ಕೋಟಿ ವೆಚ್ಚದಲ್ಲಿ ರೈಲ್ವೆ ಲೈನ್ ವಿದ್ಯುದೀಕರಣ ಮಾಡಲಾಗಿದೆ. ಕೊಂಡಜ್ಜಿ ಬಳಿ 3 ಕೋಟಿ ವೆಚ್ಚದ ಸೇತುವೆ, ಹರಳಹಳ್ಳಿ ಬಳಿ 2.60 ಕೋಟಿ ವೆಚ್ಚದಲ್ಲಿ ರಸ್ತೆ ಹಾಗೂ ಸೇತುವೆ ನಿರ್ಮಾಣ ಮಾಡಲಾಗಿದೆ. ಹರಿಹರ ತಾಲ್ಲೂಕಿಗೆ ಜಿಲ್ಲಾ ಉಸ್ತುವಾರಿ ಸಚಿವರ ಕೊಡುಗೆ ಏನೆಂದು ತಿಳಿಸಲಿ ಎಂದು ಸವಾಲು ಹಾಕಿದರು.

ಹರಿಹರ ತಾಲ್ಲೂಕಿನ ಹನಗವಾಡಿ ಬಳಿ 60 ಕೆಎಲ್‌ಡಿ ಸಾಮರ್ಥ್ಯದ 960 ಕೋಟಿ ವೆಚ್ಚದ 2 ಜಿ ಎಥೆನಾಲ್ ಘಟಕವನ್ನು ಎಂ.ಆರ್.ಪಿ.ಎಲ್ ಅವರು ನಿರ್ಮಾಣ ಮಾಡಲು ಸಿದ್ಧತೆ ನಡೆಸಿದ್ದಾರೆ. ಘಟಕ ನಿರ್ಮಾಣಕ್ಕೆ ಅಗತ್ಯವಿರುವ ಜಮೀನು ಸಹ ಕೆ.ಐ.ಎ.ಡಿ.ಬಿ. ವತಿಯಿಂದ ಹಸ್ತಾಂತರ ಮಾಡಲಾಗಿದೆ. ಕೃಷಿ ತ್ಯಾಜ್ಯದಿಂದ 2ಜಿ ಎಥೆನಾಲ್ ಉತ್ಪಾದನೆ ಮಾಡುವುದರಿಂದ ರೈತರಿಗೂ ಅನುಕೂಲವಾಗಲಿದೆ. ತಂತ್ರಜ್ಞಾನ ಉನ್ನತೀಕರಣದ ವಿಚಾರವಾಗಿ ಅನುಷ್ಠಾನ ವಿಳಂಬವಾಗಿದ್ದು, ಕೇಂದ್ರ ಪೆಟ್ರೋಲಿಯಂ ಸಚಿವಾಲಯದೊಂದಿಗೆ ಸಂಸದ ಜಿ. ಎಂ.ಸಿದ್ದೇಶ್ವರ ಅವರು ನಿರಂತರ ಸಂಪರ್ಕದಲ್ಲಿದ್ದಾರೆ. ಮೊದಲ ಆದ್ಯತೆ ಮೇರೆಗೆ ಶೀಘ್ರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುತ್ತೇನೆ. ಇದರಿಂದ ಹರಿಹರ ಭಾಗದಲ್ಲಿ ಸಾಕಷ್ಟು ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ ಎಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ಜೆಡಿಎಸ್ ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಮಾತನಾಡಿ, ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲುವುದು ನಿಶ್ಚಿತ. ಗಾಯತ್ರಿ ಸಿದ್ದೇಶ್ವರ ಅವರು 2 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಲು ಜೆಡಿಎಸ್-ಬಿಜೆಪಿ ಕಾರ್ಯಕರ್ತರು ಅಹೋರಾತ್ರಿ ಶ್ರಮಿಸುತ್ತಿದ್ದಾರೆ ಎಂದರು.

ಹರಿಹರದಲ್ಲಿ ಅತಿ ಹೆಚ್ಚು ಲೀಡ್ ಕೊಡುವ ಮೂಲಕ ಜೆಡಿಎಸ್ ಕಾರ್ಯಕರ್ತರು ಎಚ್.ಶಿವಪ್ಪ ಅವರ ಶಕ್ತಿ ಏನು ಎಂದು ಕಾಂಗ್ರೆಸ್‌ನವರಿಗೆ ತೋರಿಸಬೇಕು. ನಾನು ಜೆಡಿಎಸ್ ಶಾಸಕನಾಗಿದ್ದಾಗ ಸಂಸದ ಸಿದ್ದೇಶ್ವರ ಅವರ ಬಳಿ ಹೋಗಿ ತಾಲ್ಲೂಕು ಅಭಿವೃದ್ಧಿ ವಿಚಾರವಾಗಿ ಏನೇ ಕೇಳಿದ್ರೂ ಇಲ್ಲ ಎನ್ನದೇ ಸಹಕಾರ ನೀಡಿದ್ದರು. ಅವರ ಸಹಕಾರದಿಂದ ತಾಲ್ಲೂಕಿನಲ್ಲಿ ಅನೇಕ ಕೆಲಸಗಳು ಆಗಿವೆ. ಜನ ಅಭಿವೃದ್ಧಿ ಮಾಡುವ ಗಾಯತ್ರಿ ಅವರಿಗೆ ಮತ ಹಾಕಬೇಕೇ ವಿನಃ ಅಕ್ರಮ ಮಾಡುವವರಿಗಲ್ಲ ಎಂದು ಸೂಚ್ಯವಾಗಿ ಹೇಳಿದರು.

ಶಾಸಕ ಬಿ.ಪಿ.ಹರೀಶ್ ಮತಯಾಚಿಸಿ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಹರಿಹರಕ್ಕೆ ಏನು ಕೊಡುಗೆ ಕೊಟ್ಟಿದ್ದಾರೆ. ದಾವಣಗೆರೆಯಿಂದ ಕೂಗಳತೆ ದೂರದಲ್ಲಿರುವ ಹರಿಹರಕ್ಕೆ ವರ್ಷದಲ್ಲಿ ಎಷ್ಟು ಬಾರಿ ಭೇಟಿ ಕೊಟ್ಟಿದ್ದಾರೆ ಎಂದು ಪ್ರಶ್ನಿಸಿದರು.

### ಹರಿಹರ ತಾಲ್ಲೂಕಿನ ಮತ ಯಾಚನೆಯಲ್ಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ

### ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕ ನೀರು

**ಬೆಂಗಳೂರಿನಲ್ಲಿರುವ ಕರ್ನಾಟಕ ನೀರಾವರಿ ನಿಗಮ ಕಚೇರಿಯನ್ನು ದಾವಣಗೆರೆಗೆ ಸ್ಥಳಾಂತರ ಮಾಡಿಸಲಾಗುವುದು. ನೀರಾವರಿ ನಿಗಮ ದಾವಣಗೆರೆಗೆ ಬಂದರೆ ಕಾಡಾ ಸಭೆಗಳನ್ನು ದಾವಣಗೆರೆಯಲ್ಲೇ ನಡೆಸಬಹುದು. ಹರಿಹರ ಮತ್ತು ದಾವಣಗೆರೆ ತಾಲ್ಲೂಕಿನ ಕೊನೆ ಭಾಗದ ಗ್ರಾಮಗಳಿಗೆ ಭದ್ರಾ ನಾಲೆ ನೀರು ಸಮರ್ಪಕವಾಗಿ ಹರಿಸಲು ಸಾಧ್ಯವಾಗುತ್ತದೆ. ಕರ್ನಾಟಕ ನೀರಾವರಿ ನಿಗಮ ದಾವಣಗೆರೆಗೆ ಬಂದರೆ ಶಾಶ್ವತ ಪರಿಹಾರ ಸಿಕ್ಕಂತಾಗುತ್ತದೆ ಎಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.**

# ಮತಕ್ಕಲ್ಲದಿದ್ದರೆ, ಮಣ್ಣಿಗಾದರೂ ಬನ್ನಿ

## ಕಲಬುರಗಿಯ ಚುನಾವಣಾ ಸಮಾವೇಶದಲ್ಲಿ ಖರ್ಗೆ ಭಾವುಕ ನುಡಿ

ಕಲಬುರಗಿ, ಏ. 24 – ಲೋಕಸಭಾ ಚುನಾವಣಾ ಸಮಾವೇಶದಲ್ಲಿ ಮಾತನಾಡುವಾಗ ಭಾವುಕರಾದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮತ ನೀಡಲು ಬರದೇ ಇದ್ದರೂ ನಾನು ಸತ್ತ ಮೇಲೆ ಮಣ್ಣಿಗಾದರೂ ಬರಬೇಕು ಎಂದು ಹೇಳಿದ್ದಾರೆ.

ಅಫ್ಜಲ್‌ಪುರದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಅವರು, ನಾನು ಸತ್ತರೆ ನಮ್ಮ ಒಳ್ಳೆಯ ಕೆಲಸ ನೆನಪು ಮಾಡಿಕೊಂಡು ಸುಟ್ಟರೆ ಮೇಣದ ಬತ್ತಿ ಹಚ್ಚೋಕೆ ಬನ್ನಿ, ಹೂಳಿದರೆ ಮಣ್ಣು ಹಚ್ಚಲು ಬನ್ನಿ. ಆಗ ಆತ ಒಳ್ಳೆಯ ಕೆಲಸ ಮಾಡಿದ್ದಾನೆ, ಮಣ್ಣಿಗೆ ಎಷ್ಟು ಜನ ಬಂದರು ಎಂದು ಉಳಿದವರಾದರೂ ಹೇಳುವಂತಾಗಬೇಕು ಎಂದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ನನಗೆ ಸೋಲಾಯಿತು. ಆದರೂ ಬೇಸರವಿಲ್ಲ. ನಂತರ ದೊಡ್ಡ ಸ್ಥಾನ ಸಿಕ್ಕಿದೆ. ಆದರೆ, ಈ ಬಾರಿಯೂ ಮತ ತಪ್ಪಿದರೆ,



ನಿಮ್ಮ ಹೃದಯ ಗೆಲ್ಲಲು ನನಗೆ ಸಾಧ್ಯವಾಗಿಲಿಲ್ಲ ಎಂದುಕೊಳ್ಳುತ್ತೇನೆ ಎಂದು ಖರ್ಗೆ ಹೇಳಿದರು.

ಈ ಬಾರಿ ಕಲಬುರಗಿಯಿಂದ ಖರ್ಗೆ ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಸ್ಪರ್ಧಿಸಿದ್ದಾರೆ.

ನಾನು ಚುನಾವಣೆಗೆ ಸ್ಪರ್ಧಿಸದೇ ಇದ್ದರೂ ನಿವೃತ್ತಿ ಇಲ್ಲ. ನಾನು ಹುಟ್ಟಿದ್ದೇ ರಾಜಕಾರಣಕ್ಕಾಗಿ. ಹೀಗಾಗಿ ನಿವೃತ್ತನಾಗುವುದಿಲ್ಲ. ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಉಳಿಸಲು ಕೊನೆ ಉಸಿರಿನವರೆಗೂ ಹೋರಾಟ ನಡೆಸುತ್ತೇನೆ ಎಂದರು.

ವೇದಿಕೆಯಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಕಿವಿಮಾತು ಹೇಳಿದ ಖರ್ಗೆ, ನೀವು ಮುಖ್ಯಮಂತ್ರಿ ಸ್ಥಾನ ಹಾಗೂ ಶಾಸಕ ಸ್ಥಾನದಿಂದ ನಿವೃತ್ತರಾಗಬಹುದು. ಆದರೆ, ಬಿಜೆಪಿ - ಆರ್.ಎಸ್‌ಎಸ್. ತತ್ವಗಳ ವಿರುದ್ಧ ಹೋರಾಟ ಮುಂದುವರೆಸಬೇಕು ಎಂದು ಹೇಳಿದರು.

ಹುದ್ದೆ ಹಾಗೂ ಚುನಾವಣೆಯಿಂದ ನಿವೃತ್ತರಾಗಬಹುದು. ಬಿಜೆಪಿ - ಆರ್. ಎಸ್.ಎಸ್. ಸಿದ್ಧಾಂತಗಳನ್ನು ಸೋಲಿಸುವವರೆಗೆ ರಾಜಕೀಯವಾಗಿ ನಿವೃತ್ತರಾಗುವಂತಿಲ್ಲ.

ತುಳಿತಕ್ಕೊಳಗಾದವರಿಗೆ ಆಗಿರುವ ಅನ್ಯಾಯ ಸರಿಪಡಿಸಲು ಯಾವುದೇ ರೀತಿಯಲ್ಲಾದರೂ ಕೆಲಸ ಮಾಡುತ್ತಿರಬೇಕು ಎಂದರು.

# ಪ್ರಧಾನಿ ವಿರುದ್ಧದ ದೂರುಗಳ ಪರಿಶೀಲನೆ

ನವದೆಹಲಿ, ಏ. 24 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಸ್ತಿ ಹಂಚಿಕೆ ಕುರಿತು ರಾಜಸ್ಥಾನದಲ್ಲಿ ನೀಡಿದ ಹೇಳಿಕೆಗಳ ಕುರಿತು ದಾಖಲಾಗಿರುವ ದೂರುಗಳನ್ನು ಚುನಾವಣಾ ಆಯೋಗ ಪರಿಶೀಲಿಸುತ್ತಿದೆ.

ಕಾಂಗ್ರೆಸ್ ಹಾಗೂ ಸಿಪಿಐ (ಎಂ)ಗಳು ಈ ವಿಷಯದ ಬಗ್ಗೆ ಚುನಾವಣಾ ಆಯೋಗದ ಬಳಿ ಪ್ರತ್ಯೇಕ ದೂರು ದಾಖಲಿಸಿದ್ದವು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಸಂಪತ್ತು ಮರು ಹಂಚಿಕೆ ಮಾಡಲಿದೆ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಸಂಪತ್ತಿನಲ್ಲಿ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕಿದೆ ಎಂದು ಹೇಳಿದ್ದರು ಎಂದು ಮೋದಿ ಸಮಾವೇಶದಲ್ಲಿ ತಿಳಿಸಿದ್ದರು. ಪ್ರಧಾನಿ ಮೋದಿ ಹೇಳಿಕೆ ವಿಭಜನಾತ್ಮಕ ಹಾಗೂ ನಿರ್ದಿಷ್ಟ ಧಾರ್ಮಿಕ ಸಮುದಾಯವನ್ನು ಗುರಿಯಾಗಿಟ್ಟುಕೊಂಡಿರುವುದಾಗಿ ಎಂದು ಪ್ರತಿಪಕ್ಷಗಳು ಆರೋಪಿಸಿದ್ದವು.

ಈ ಹೇಳಿಕೆ ಕುರಿತು ದಾಖಲಾಗಿರುವ ದೂರು ಗಳನ್ನು ಚುನಾವಣಾ ಆಯೋಗ ಪರಿಶೀಲಿಸುತ್ತಿದೆ ಎಂದು ಮೂಲಗಳು ಹೇಳಿವೆ.

# ಚುನಾವಣಾ ಬಾಂಡ್ : ತನಿಖೆಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲು

ನವದೆಹಲಿ, ಏ. 24 - ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ಹಾಗೂ ಕಾರ್ಪೊರೇಟ್ ಸಂಸ್ಥೆಗಳ ನಡುವೆ ಕೊಡು ಕೊಳ್ಳುವಿಕೆ ನಡೆದಿದೆ. ಈ ಬಗ್ಗೆ ನ್ಯಾಯಿಕ ತನಿಖೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದೆ.

ಐವರು ಸದಸ್ಯರ ಸಂವಿಧಾನಿಕ ಪೀಠ ಕಳೆದ ಫೆಬ್ರವರಿ 15ರಂದು ಅನಾಮಿಕವಾಗಿ ಚುನಾವಣಾ ಬಾಂಡ್ ನೀಡುವ ಯೋಜನೆಯನ್ನು ರದ್ದುಗೊಳಿಸಿತ್ತು.

ವಕೀಲ ಪ್ರಶಾಂತ್ ಭೂಷಣ್ ಅವರು ಅರ್ಜಿ ದಾಖಲಿಸಿದ್ದು, ನಷ್ಟದಲ್ಲಿರುವ ಹಾಗೂ ಶೆಲ್ ಕಂಪನಿಗಳು ದೇಣಿಗೆ ನೀಡಿರುವ ಬಗ್ಗೆ ವಿಶೇಷ ತನಿಖಾ ತಂಡದ ಮೂಲಕ ತನಿಖೆ ನಡೆಸಬೇಕು ಎಂದು ಕೇಳಿದ್ದಾರೆ.

# ಭಾಷಣದ ವೇಳೆಯೇ ಕುಸಿದ ನಿತಿನ್ ಗಡ್ಕರಿ

ಯಾವತ್ಮಲ್ (ಮಹಾರಾಷ್ಟ್ರ), ಏ. 24 – ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಮಹಾರಾಷ್ಟ್ರದ ಯಾವತ್ಮಲ್ ಜಿಲ್ಲೆಯಲ್ಲಿ ನಡೆದ ಚುನಾವಣಾ ಸಮಾವೇಶದಲ್ಲಿ ಭಾಷಣ ಮಾಡುವಾಗ ಅಸ್ವಸ್ಥಗೊಂಡು ಕುಸಿದ ಘಟನೆ ನಡೆದಿದೆ.

ಅವರೊಂದಿಗಿದ್ದ ಭದ್ರತಾ ಸಿಬ್ಬಂದಿ ಸಚಿವರನ್ನು ವೇದಿಕೆಯಿಂದ ಹೊರಗೆ ಕರೆದುಕೊಂಡು ಹೋದರು.

ಆದರೆ, ಕೆಲ ನಿಮಿಷಗಳ ನಂತರ ವಾಪಸ್ ಬಂದ ಗಡ್ಕರಿ ತಮ್ಮ ಭಾಷಣ ಪೂರ್ಣ ಗೊಳಿಸಿ ದರು. ಸಮಾವೇಶದ ವೇಳೆ ಬಿಸಿಲಿನ ಕಾರಣದಿಂದ ಬಳಲಿಕೆಯಾಗಿತ್ತು. ಈಗ ನಾನು ಸಂಪೂರ್ಣ ಚೇತರಿಸಿಕೊಂಡಿದ್ದೇನೆ. ವರುದ್‌ನಲ್ಲಿ ನಡೆಯಲಿರುವ ಸಮಾವೇಶಕ್ಕೆ ತೆರಳಲಿದ್ದೇನೆ ಎಂದು ಗಡ್ಕರಿ ನಂತರ ಟ್ವೀಟ್ ಮಾಡಿದ್ದಾರೆ.

# ಜಗಳೂರು : ವಿನಯ್ ಜಾಥಾಕ್ಕೆ ಭಾರೀ ಬೆಂಬಲ



ಜಗಳೂರು, ಏ.24- ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಪರ ಅಭಿಮಾನಿಗಳು, ಹಿತೈಷಿಗಳು ಜಗಳೂರಿನಲ್ಲಿ ಏರ್ಪಡಿಸಿದ್ದ ಜಾಥಾಕ್ಕೆ ಭಾರೀ ಬೆಂಬಲ ವ್ಯಕ್ತವಾಯಿತು.

ಪಟ್ಟಣದ ಈಶ್ವರ ದೇವಸ್ಥಾನದಿಂದ ಮಧ್ಯಾಹ್ನ ಜಾಥಾ ಆರಂಭಗೊಂಡು, ಸರ್ಕಾರಿ ಆಸ್ಪತ್ರೆ ಹಾಗೂ ಮಲ್ಲೇನಹಳ್ಳಿ ವೃತ್ತದ ಮೂಲಕ ಡಾ. ಬಿ. ಆರ್. ಅಂಬೇಡ್ಕರ್ ವೃತ್ತಕ್ಕೆ ತಲುಪಿತು. ಅಲ್ಲಿ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಜಿ. ಬಿ. ವಿನಯ್ ಕುಮಾರ್ ಮಾಲಾರ್ಪಣೆ ಮಾಡಿದರು. ಆ ಬಳಿಕ ತರಳಬಾಳು ಕಲ್ಯಾಣ ಮಂಟಪದ ಬಳಿ ಜಾಥಾ ಕೊನೆಗೊಂಡಿತು.

ತರಳಬಾಳು ಕಲ್ಯಾಣ ಮಂಟಪದಲ್ಲಿ ಇಂದು ಆಯೋಜಿಸಿದ್ದ ಬೂತ್ ಮಟ್ಟದ ಕಾರ್ಯಕರ್ತರ ಮತ್ತು ಅಭಿಮಾನಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿನಯ್ ಕುಮಾರ್ ಅವರು, ಅಂಬೇಡ್ಕರ್ ಆಶಯಗಳು ಈಡೇರದೇ ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿದೆ. ಪ್ರಜಾಪ್ರಭುತ್ವ ಉಳಿಸುವ ಕಾಳಜಿ ನನ್ನದು ಎಂದರು.

ಡಾ. ಬಿ.ಆರ್ .ಅಂಬೇಡ್ಕರ್ ರವರು ಕಂಡ ಕನಸು ನನಸು ಮಾಡಲು ಪ್ರಯತ್ನಿಸುವೆ. ಅಂಬೇಡ್ಕರ್ ಅವರು ಸಾಮಾನ್ಯನಿಗೂ ಸಮಾನ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅವರ ಆಶಯದಂತೆ ನಾನು ಕೂಡ ರಾಜಕೀಯ ಕನಸನ್ನು ಕಂಡು ಜನಸೇವೆ ಮಾಡಲು ಮುಂದಾಗಿದ್ದೇನೆ. ನನ್ನಂಥವರನ್ನು ರಾಜಕೀಯವಾಗಿ ಬೆಳೆಯಲು ರಾಜಪ್ರಭುತ್ವದ ವ್ಯವಸ್ಥೆ ಕಟ್ಟಿ ಹಾಕುತ್ತಿದೆ. ನನಗೆ ದೊಡ್ಡ ಮುಖಂಡರುಗಳು ದೊಡ್ಡ ಅವಕಾಶಗಳನ್ನು ಕೊಟ್ಟರೂ ನಾನು ಅದನ್ನು ತಿರಸ್ಕರಿಸಿ ಸಾಮಾನ್ಯ ಜನರು ಕೊಟ್ಟ ಆಶಯ, ಆಶ್ವಾಸನೆಗೆ ಬದ್ಧನಾಗಿ ಸೇವೆ ಮಾಡಲು ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ. ಆದ್ದರಿಂದ ಈ ಬಾರಿ ಪಕ್ಷೇತರ ಅಭ್ಯರ್ಥಿಯಾದ ನನ್ನ ಗ್ಯಾಸ್ ಸಿಲಿಂಡರ್ ಗುರುತಿಗೆ ಮತ ಚಲಾಯಿಸಿ ಪ್ರಜಾಪ್ರಭುತ್ವ ವ್ಯವಸ್ಥೆ ಎತ್ತಿ ಹಿಡಿಯಬೇಕೆಂದು ಮನವಿ ಮಾಡಿದರು.

ಜಗಳೂರು ತಾಲ್ಲೂಕಿನಲ್ಲಿ ಚೆನ್ನಯ್ಯ ಒಡೆಯರ್, ಇಮಾಮ್ ಸಾಬ್ ಜಿಲ್ಲೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅವರ ಹೆಸರಿನ ಒಂದು ವೃತ್ತ ಕೂಡ ಇಲ್ಲ. ವಾಲ್ಮೀಕಿ ನಾಯಕ ಸಮಾಜದ ವೃತ್ತವೂ ಇಲ್ಲ. ನಮ್ಮದೇ ಗುರುತು ಅಹಿಂದ ಜನ ಧ್ವನಿ ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರಜ್ಞಾವಂತ ಯುವಕರು ಕನಸು ಕಾಣುತ್ತಿದ್ದರೆ ವ್ಯವಸ್ಥೆ ತಪ್ಪು ಎಂದು ಪ್ರತಿಬಿಂಬಿಸುತ್ತದೆ. ಅವರು ದೈತ್ಯವಾಗಿ ಕಟ್ಟಿರುವ ಸಾಮ್ರಾಜ್ಯಕ್ಕೆ ಧಕ್ಕೆ ಆಗುತ್ತಿದೆ ಎಂಬ ಆತಂಕ ಅವರಲ್ಲಿದೆ. ಭರವಸೆ ಈಡೇರಿಸದಿದ್ದರೂ ಮತ್ತೆ ಭರವಸೆ ಕೊಡುತ್ತಾರೆ. ಎಂಪಿ ಟಿಕೆಟ್ ತಂದಿರುವುದು ಸೇವೆ ಮಾಡಲು ಅಲ್ಲ, ತಮ್ಮ ಅಧಿಕಾರ ಉಳಿಸಿಕೊಳ್ಳಲು ಎಂದು ಹೇಳಿದರು.

ಯಾದವ ಸಮಾಜದ ಮುಖಂಡ ಕೃಷ್ಣಪ್ಪ ಮಾತನಾಡಿ, ಸಿಲಿಂಡರ್ ಸ್ಫೋಟ ಆದರೆ ಜನರು ಚೆಲ್ಲಾಪಿಲ್ಲಿ ಆಗುತ್ತಾರೆ. ವಿನಯ್ ಕುಮಾರ್ ಸಿಲಿಂಡರ್ ಸ್ಫೋಟವಾದರೆ ಬಿಜೆಪಿ, ಕಾಂಗ್ರೆಸ್ ಧೂಳೀಪಟವಾಗಲಿದೆ. ವಿನಯ್ ಕುಮಾರ್ ಅವರನ್ನು ಸಂಸತ್ ಭವನಕ್ಕೆ ಕಳುಹಿಸುವವರೆಗೂ ಹೋರಾಟ ಮಾಡಬೇಕು. ನೀವು ವಿನಯ್ ಕುಮಾರ್ ಅವರಿಗೆ ಹಾಕುವ ಮತಗಳ ಸ್ಫೋಟಕ್ಕೆ ಬಿಜೆಪಿ, ಕಾಂಗ್ರೆಸ್ ಕೊಚ್ಚಿ ಹೋಗುವಂತಾಗಬೇಕು ಎಂದರು.

ವಿವಿಧ ಸಮಾಜಗಳ ಮುಖಂಡರಾದ ಪ್ರಸನ್ನ ಕುಮಾರ್, ನಜೀರ್ ಅಹ್ಮದ್, ಪ್ರಕಾಶ್, ಜಯಣ್ಣ, ಕುಮಾರ್, ಮಾಲಿಂಗಪ್ಪ, ಹೇಮರೆಡ್ಡಿ, ತಿಪ್ಪೇಸ್ವಾಮಿ, ಭೂಪತಿ, ಶ್ರೀನಿವಾಸ್, ನೀಲಪ್ಪ, ರಂಗನಾಥ್, ಮಹಾಂತೇಶ್, ಹನುಮಂತಪ್ಪ, ಬಸವಂತಪ್ಪ ಸೇರಿದಂತೆ ಇತರರು ಪಾಲ್ಗೊಂಡಿದ್ದರು. ರವಿ ಯು. ಸಿ. ಸ್ವಾಗತಿಸಿದರು.

# ಕೆರೆ ತುಂಬಿಸುವ ಯೋಜನೆಗೆ ಕೈ ಹಾಕಿದ್ದು ಕಾಂಗ್ರೆಸ್

ಹರಪನಹಳ್ಳಿ, ಏ.24- ಹರಪನಹಳ್ಳಿ ಹಾಗೂ ಜಗಳೂರು ವಿಧಾನಸಭಾ ಕ್ಷೇತ್ರಗಳು ಕಾಂಗ್ರೆಸ್ ಪಕ್ಷದ ಭದ್ರ ಕೋಟೆಗಳು, ಈ ಭಾಗದ 57 ಹಾಗೂ 22 ಕೆರೆಗಳಿಗೆ ನೀರು ತುಂಬಿರುವ ಯೋಜನೆಗೆ ಕೈ ಹಾಕಿದ್ದು ಕಾಂಗ್ರೆಸ್ ಪಕ್ಷ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ತಿಳಿಸಿದರು.

ಹರಪನಹಳ್ಳಿ ತಾಲ್ಲೂಕಿನ ಜಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಅರಸೀಕೆರೆ ಹೋಬಳಿಯಲ್ಲಿ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪರ ಮತಯಾಚನೆ ನಡೆಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಭದ್ರ ಕೋಟೆಯಾಗಿರುವ ಈ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಎಲ್ಲರ ಆಶೀರ್ವಾದ ಪಡೆಯಲು ಬಂದಿದ್ದೇವೆ. ನಾವಿಲ್ಲಿ ಬಂದು ಮತವನ್ನು ಸುಮ್ಮನೆ ಕೇಳುತ್ತಿಲ್ಲ. ನಿಮ್ಮ ನಿರೀಕ್ಷೆಗಳಿಗೂ ಮೀರಿ ಕೆಲಸ ಮಾಡಿದ್ದೇವೆ. ಹೀಗಾಗಿ ನಾವು ಮತವನ್ನು ಕೇಳುತ್ತಿದ್ದೇವೆ ಎಂದರು.

ಈ ಭಾಗಗಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ರೈತರಿಗಾಗಿ ಉತ್ತಮವಾದ ಕಾರ್ಯಗಳಾ ಬೇಕಿದೆ. ನಿರುದ್ಯೋಗ ಸಮಸ್ಯೆ ನಿವಾರಣೆ ಆಗಬೇಕಿದೆ. ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿರುವ ಪ್ರಣಾ ಳಿಕೆ ಬಡವರ ಪರವಾಗಿವೆ. ಬಡವರ ಅಭಿವೃದ್ಧಿ ಏಳಿಗೆಗಾಗಿ ಕಾಂಗ್ರೆಸ್ ಪಕ್ಷಕ್ಕೆ ಕೈ ಜೋಡಿಸಿ ಎಂದರು.

ಈ ಬಾರಿಯ ಲೋಕಸಭಾ ಚುನಾವಣೆ ತುಂಬಾ ಮಹತ್ವದ ಚುನಾವಣೆಯಾಗಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅತ್ಯಂತ ಹೆಚ್ಚಿನ ಮತಗಳ ಅಂತರದಲ್ಲಿ ಗೆಲುವು ಸಾಧಿಸಲು ಪ್ರತಿಯೊಬ್ಬರು ಸಹಕರಿಸಬೇಕು ಎಂದು ಕೇಳಿಕೊಂಡರು.

ಅರಸಿಕೆರೆ, ಕಂಚಿಕೆರೆ, ತೌಡೂರು, ತೆಲಗಿ, ಹಲುವಾಗಲು, ಉಚ್ಚಂಗಿದುರ್ಗ ಮುಂತಾದ ಇನ್ನೂ ಅನೇಕ ಕಡೆಗಳಲ್ಲಿನ ಗ್ರಾಮ ಪಂಚಾಯ್ತಿಗಳಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರುಗಳಿದ್ದಾರೆ. ಎಲ್ಲಾ ಕಾರ್ಯಕರ್ತರುಗಳು ಕುಟುಂಬ ಸಮೇತರಾಗಿ ಮತಗಟ್ಟೆಗಳಿಗೆ ಆಗಮಿಸಿ, ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುವುದರ ಮೂಲಕ ಜ್ಞಾನವಂತೆ, ವಿದ್ಯಾವಂತೆಯಾಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ ಅವರನ್ನು ಗೆಲ್ಲಿಸಿ, ಲೋಕಸಭೆಗೆ ಕಳುಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಗಳೂರು ವಿಧಾನಸಭಾ ಕ್ಷೇತ್ರದ ಶಾಸಕ ದೇವೇಂದ್ರಪ್ಪ, ಹರಪನಹಳ್ಳಿಯ ಕಾಂಗ್ರೆಸ್ ಪಕ್ಷದ ಮುಖಂಡ ಅರಸೀಕೆರೆ ಕೊಟ್ರೇಶ್, ಯುವ ಮುಖಂಡ ಪಿ.ಟಿ.ಭರತ್, ಜಗಳೂರಿನ ಕೆ.ಪಿ. ಪಾಲಯ್ಯ, ಡಿ.ಬಸವರಾಜ್, ಅಣಜಿಗೆರೆ ಚಂದ್ರಪ್ಪ, ಡಾ|| ಟಿ.ಜಿ.ರವಿಕುಮಾರ್, ಕಂಬತ್ತಳ್ಳಿ ಮಂಜುನಾಥ್, ಕಲ್ಲೇಶ್‌ರಾಜ್ ಪಾಟೀಲ್, ರವಿಚಂದ್ರ, ಎಸ್.ಎಂ.ಜಯಪ್ರಕಾಶ್, ಉಚ್ಚಂಗಿದುರ್ಗದ ಯಶವಂತಗೌಡ ಹಾಗೂ ಇತರರು ಉಪಸ್ಥಿತರಿದ್ದರು.



### ಹರಪನಹಳ್ಳಿ ಹಾಗೂ ಜಗಳೂರು ಕ್ಷೇತ್ರಗಳು ಕಾಂಗ್ರೆಸ್ ಪಕ್ಷದ ಭದ್ರಕೋಟೆಗಳು : ಸಚಿವ ಎಸ್ಸೆಸ್ಸೆಂ



### ಹೆಬ್ಬಾಳು ಶ್ರೀಗಳ ಆಶೀರ್ವಾದ ಪಡೆದ ಎಸ್ಸೆಸ್ಸೆಂ

ದಾವಣಗೆರೆ, ಏ.24- ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಇಂದು ಹೆಬ್ಬಾಳಿನ ಶ್ರೀ ರುದ್ರೇಶ್ವರ ವಿರಕ್ತಮಠಕ್ಕೆ ಭೇಟಿ ನೀಡಿ, ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿಯವರ ಆಶೀರ್ವಾದ ಪಡೆದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas